15. ಕರ್ನಾಟಕ ವಿಶ್ವವಿದ್ಯಾನಿಲಯ ಧಾರವಾಡ 2001–02ನೇ ಸಾಲಿನ ವಾರ್ಷಿಕ ಲೆಕ್ಕಪತ್ರ ಮತ್ತು ಲೆಕ್ಕ ಪರಿಶೋಧನೆಯ ಅನುಸರಣಾ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಇವತ್ತು ಅಪರೂಪಕ್ಕೆ ಮಾನ್ಯ ಜನಸಂಪನ್ಮೂಲ ಮಂತ್ರಿಗಳು ಬಂದಿದ್ದಾರೆ. ಶೂನ್ಯ ವೇಳೆಯಲ್ಲಿ ಅವರಿಗೆ ದಯವಿಟ್ಟು ಸ್ವಲ್ಪ ಇರಲಿಕ್ಕೆ ಹೇಳಿ. ಅವರು ಆ ಸದನದ ನಾಯಕರು ಆಗಿರುವುದರಿಂದ ಯಾವಾಗಲೂ ಅಲ್ಲೇ ಇರುತ್ತಾರೆ. ಇವತ್ತು ಅಪರೂಪಕ್ಕೆ ನಮ್ಮ ಸದನಕ್ಕೆ ಬಂದಿದ್ದಾರೆ. ಮಾನ್ಯ ನೀರಾವರಿ ಮಂತ್ರಿಗಳಾದ ಶ್ರೀ ಹೆಚ್.ಕೆ. ಪಾಟೀಲರ ಗಮನಕ್ಕೆ ಕೆಲವು ಮುಖ್ಯವಾದ ವಿಚಾರಗಳನ್ನು ತರತಕ್ಕದ್ದು ಇದೆ. ರಾಜ್ಯದ ಮಹತ್ವದ ವಿಚಾರಗಳನ್ನು ಅವರ ಗಮನಕ್ಕೆ ತರಬೇಕಾಗಿರುವುದರಿಂದ ದಯವಿಟ್ಟು ಅವರಿಗೆ ಇವತ್ತು ಶೂನ್ಯವೇಳೆಯಲ್ಲಿ ಇರುವುದಕ್ಕೆ ತಾವು ಹೇಳಬೇಕು.

ಅಧ್ಯಕ್ಷರು : ಪ್ರಶ್ನೋತ್ತರ ವೇಳೆ ಇರುವಾಗ ಅವರು ಯಾವಾಗಲೂ ಬರುತ್ತಾರೆ.

3. ತಿದ್ದುಪಡಿ ಪ್ರಸ್ತಾವ

ವಿಷಯ : ಲಾಟರಿಗಳ ಮೇಲೆ ಹೊರಡಿಸಿರುವ ಅಧಿಸೂಚನೆಗಳನ್ನು ಹಿಂದಕ್ಕೆ ಪಡೆಯುವುದು.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಸೋಮಶೇಖರ್ ಅವರ ತಿದ್ದುಪಡಿ ಪ್ರಸ್ತಾವವನ್ನು ತಂದಿದ್ದಾರೆ. ಆನ್ ಲೈನ್ ಲಾಟರಿ ಮೇಲೆ ರೂಲ್ 61ರಲ್ಲಿ ನೋಟೀಸ್‌ನ್ನು ನಾನು ಮತ್ತು ಶ್ರೀ ಮಲ್ಲಿಕಾರ್ಜುನ್ ಅವರು ಕೊಟ್ಟಿದ್ದೇವೆ. ಪ್ರಾಯಶಃ ಅದಾದಮೇಲೆ ನಮ್ಮದನ್ನು ತಾವು ತೆಗೆದುಕೊಳ್ಳಬೇಕು.

ಅಧ್ಯಕ್ಷರು : ಆಯಿತು. ಅವರದ್ದಾದ ಮೇಲೆ ನೀವು ಮಾತನಾಡಿ.

ಶ್ರೀ ಬಿ. ಸೋಮಶೇಖರ್ (ಮುಳಬಾಗಿಲು) : ಮಾನ್ಯ ಅಧ್ಯಕ್ಷರೆ, ತಮ್ಮ ಅನುಮತಿ ಕೋರಿ ಈ ಕೆಳಕಂಡ ತಿದ್ದುಪಡಿ ಪ್ರಸ್ತಾವವನ್ನು ಸಭೆಯ ಮುಂದೆ ಮಂಡಿಸ ಬಯಸುತ್ತೇನೆ.

"1998 ರ ಲಾಟರಿಗಳ (ವಿನಿಯಮನ) ಅಧಿನಿಯಮ 12(3)ರ ಪ್ರಕರಣದ ಮೇರೆಗೆ ಹೊರಡಿಸಲಾಗಿರುವ ಕೆಳಕಂಡ ಅಧಿಸೂಚನೆಗಳನ್ನು ಹಿಂದಕ್ಕೆ ಪಡೆಯುವುದು.'

1. 2001ರ ಕರ್ನಾಟಕ ಗಣಕೀಕೃತ ನೆಟ್‌ವರ್ಕ್ ಲಾಟರಿ ನಿಯಮಗಳನ್ನು ರಚಿಸಿ ದಿನಾಂಕ 16–5–2001 ರಂದು ಹೊರಡಿಸಲಾದ ಆಇ:181: ಸಉಲಾ 2000 ನೇ ಸಂಖ್ಯೆಯ ಅಧಿಸೂಚನೆ.
2. 1999ರ ಕರ್ನಾಟಕ ರಾಜ್ಯ ಲಾಟರಿ ನಿಯಮಗಳನ್ನು ರಚಿಸಿ, ದಿನಾಂಕ 8–9–2000 ರಂದು ಹೊರಡಿಸಲಾದ ಆಇ: 117:ಸಉಲಾ: 1997ನೇ ಸಂಖ್ಯೆಯ ಅಧಿಸೂಚನೆ."

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) : ಮಾನ್ಯ ಸಭಾಧ್ಯಕ್ಷರೇ, ನಮ್ಮ ಪ್ರಜಾಪ್ರಭುತ್ವದ ನೀತಿಗನುಗುಣವಾಗಿ ನಮ್ಮ ಪಾರ್ಲಿಮೆಂಟರಿ ಡೆಮಾಕ್ರಸಿಯಲ್ಲಿ ಏನಿದೆ ಎಂದರೆ ಒಂದು ಸರ್ಕಾರ ಆಡಳಿತ ಮಾಡಬೇಕಾದರೆ ಒಂದು ಮಸೂದೆಯನ್ನು ತಂದು ಆ್ಯಕ್ಟ್‌ನ್ನು ಮಾಡಬೇಕು. ಈಗ ಇಲ್ಲಿ ಕಾನೂನು ಮಂತ್ರಿಗಳು ಇರಬೇಕು. ಲಾಟರಿ ಮಂತ್ರಿಗಳು ಇರಬೇಕು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಸಂಬಂಧಪಟ್ಟ ಮಂತ್ರಿಗಳು ಇಲ್ಲ.

ಅಧ್ಯಕ್ಷರು : ಕಾನೂನು ಮಂತ್ರಿಗಳು ಇದ್ದಾರೆ, ಅವರು ಹೇಳುತ್ತಾರೆ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೇ, ಮೊದಲು ಸರ್ಕಾರ ಏನಾದರೂ ಆಡಳಿತ ನಡೆಸಬೇಕಾದರೆ ಕಾನೂನನ್ನು ಮಾಡತಕ್ಕಂಥ ಅಧಿಕಾರ ನಮಗೆಲ್ಲರಿಗೂ ಗೊತ್ತಿರುವ ಹಾಗೆ ಈ ಸದನಕ್ಕೆ ಇದೆ. ಈ ಸದನ ಕಾನೂನನ್ನು ಮಾಡಿ ಎಕ್ಸಿಕ್ಯೂಟಿವ್‌ಗೆ ನಾವು ಕೊಡುತ್ತೇವೆ. ಎಂದರೆ ಮೊದಲು ಮಸೂದೆಯನ್ನು ತಂದು ಆ್ಯಕ್ಟ್ ನ್ನಾಗಿ ಮಾಡಿದ ಮೇಲೆ ಆ ಆ್ಯಕ್ಟ್ ಕೆಳಗಡೆ ನಿಯಮಾವಳಿಗಳನ್ನು ರಚನೆ ಮಾಡಿ ಅದು ಕೊಟ್ಟ ಮೇಲೆ ಆ್ಯಕ್ಟ್ ಜಾರಿಗೆ ಬರುತ್ತದೆ. ಇದು ಎಲ್ಲರಿಗೂ ಕೂಡ ಗೊತ್ತಿರತಕ್ಕಂಥ ವಿಚಾರ. ಈಗ ಅನೇಕ ಆ್ಯಕ್ಟ್ ಗಳನ್ನು ನಾವು ತಂದಿದ್ದೇವೆ. ಅದಾದಮೇಲೆ ನಮ್ಮಲ್ಲಿ ಸಬ್ ಆರ್ಡಿನೇಟ್ ಲೆಜಿಸ್ಲೇಷನ್ ಕಮಿಟಿ ಎಂದು ಇದೆ. ಅಂದರೆ ರೂಲ್ಸ್‌ನ್ನು ಮಾಡತಕ್ಕಂಥಾದ್ದು ಒಂದು ವಿಧಾನ. ಈ ರೂಲ್ಸ್ ಮಾಡತಕ್ಕಂಥಾದ್ದನ್ನು ನಾವು ಎಕ್ಸಿಕ್ಯೂಟಿವ್‌ಗೆ ಕೊಟ್ಟಿದ್ದೇವೆ. ಏಕೆಂದರೆ ಪ್ರತಿ ಕೆಲಸವನ್ನೂ ಕೂಡ ವಿಧಾನಸಭೆ ಮಾಡುವುದಕ್ಕೆ ಆಗುವುದಿಲ್ಲ. ಕೆಲವು ಮಸೂದೆಗಳನ್ನು ತಂದು ಆ್ಯಕ್ಟ್ ಮಾಡಿ ರೂಲ್ಸ್ ಮಾಡತಕ್ಕಂಥ ಅಧಿಕಾರವನ್ನು ಆಡಳಿತದ ಅಧಿಕಾರಿಗಳಿಗೆ ನಾವು ಕೊಡುತ್ತೇವೆ. ಆದರೆ ಆ ರೂಲ್ಸ್‌ನ್ನು ಮಾಡಿ ನೋಟಿಫಿಕೇಷನ್‌ಗಳನ್ನು ಹೊರಡಿಸಿದ ಮೇಲೆ ಅದನ್ನೂ ಸಹ ಇಲ್ಲಿ ಈ ಸದನದಲ್ಲಿ ಇಡತಕ್ಕಂಥ ಪ್ರವೃತ್ತಿ ಬಹಳ ವರ್ಷಗಳಿಂದ ನಡೆಯುತ್ತಿದೆ. ಇದು ವಿಧಾನದಲ್ಲಿ, ಪಾರ್ಲಿಮೆಂಟರಿ ಡೆಮಾಕ್ರಸಿಯಲ್ಲಿ–The notifications are also should be placed in the House.

ಅದರ ಪ್ರಕಾರ ಏನಿವೆ ಎಂದರೆ–Internal Rules for working of the committee on Subordinate Legislation-

ಅದರಲ್ಲಿ ಏನಿದೆ ಎಂದರೆ– Each administrative department shall forward to Karnataka Legislative Assembly secretariat 75 copies of every rule, regulaiotn, sub-rule, notification, bye-law etc., made by the State Government in exercise of the powers confirmed by the Constitution or delegated by the Parliament or by the State Legislature and which is required to be laid before each House of the Legislature together with the explainatory note thereon within 15 days from the date on which it is made.

ಅಂದರೆ ಯಾವುದೇ ಒಂದು ರೂಲ್ಸ್ ಮಾಡಿ ಅಧಿಸೂಚನೆಯನ್ನು ಹೊರಡಿಸಿದ ಮೇಲೆ, ಅದನ್ನು ಹೊರಡಿಸಿದ ಹದಿನೈದು ದಿವಸಗಳ ಒಳಗೆ ಈ ಸದನಕ್ಕೆ ಮಂಡಿಸಬೇಕು ಎನ್ನತಕ್ಕಂಥಾದ್ದು ಇದೆ.

ಒಂದು ವೇಳೆ ಅಧಿವೇಶನ ನಡೆಯುತ್ತಿಲ್ಲವೆಂದರೆ ಅಧೀನ ಶಾಸನ ರಚನಾ ಸಮಿತಿ ಮುಂದೆ ಬರಬೇಕು. ನಂತರ ತಕ್ಷಣ ಅಧಿವೇಶನ ಏನು ಕರೆಯುತ್ತಾರೆ ಅದರ ಮುಂದೆ ಇಡತಕ್ಕಂಥಾದ್ದು ಒಂದು ಪದ್ಧತಿ. ಈಗ ನಾನು ಹೇಳುತ್ತಿದ್ದೇನೆ. ತಾವು ಆ ಇಲಾಖೆಗಳ ಮಂತ್ರಿಗಳಾಗಿದ್ದೀರಿ. ತಾವು

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಅಂದರೆ ಎರಡೂ ಖಾತೆಗಳ ಮಂತ್ರಿಗಳು ತಾವಾಗಿದ್ದೀರಿ. ಈ ಒಂದು ಅಧಿಕಾರವನ್ನು ನಾವೇನು ಅಧಿಕಾರಿಗಳಿಗೆ ಕೊಟ್ಟಿದ್ದೇವೆ ಇದನ್ನು ಯಾರು ಪ್ರಾಮಾಣಿಕವಾಗಿ ಕಾನೂನು ಬದ್ಧನುವಾಗಿ ನಡೆಸಿದ್ದಾರೆ ಎನ್ನತಕ್ಕಂಥಾದ್ದನ್ನು ನಾನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಈಗ ನಾನು ಕೆಲವು ಉದಾಹರಣೆಗಳನ್ನು ಕೊಡುತ್ತೇನೆ. ಸುಮಾರು 60 ನೋಟಿಫಿಕೇಶನ್ ಗಳು, ಒಂದು ನೋಟಿಫಿಕೇಶನ್‌ಗೆ ಒಂದು ವರ್ಷ ಎಂಟು ತಿಂಗಳು, ಮತ್ತೊಂದು ನೋಟಿಫಿಕೇಶನ್ ಗೆ ಎರಡು ವರ್ಷ; ಮೂರು ವರ್ಷ ಒಂದು ತಿಂಗಳು, ಎರಡು ವರ್ಷ ಎಂಟು ತಿಂಗಳು, ಮೂರು ವರ್ಷ. ಈ ರೀತಿ ಆಗಿವೆ. ಇದುವರೆಗೆ ತಾವು ಎಷ್ಟು ಅಧಿವೇಶನಗಳನ್ನು ಕರೆದಿದ್ದೀರಿ? ಎಷ್ಟು ಅಧೀನ ಶಾಸನ ರಚನಾ ಸಮಿತಿಯ ಮೀಟಿಂಗ್ ಗಳು ಆಗಿವೆ? ಈ ಮೂರು ವರ್ಷಗಳತನಕ ಎರಡು ವರ್ಷಗಳ ತನಕ ಆ ನೋಟಿಫಿಕೇಶನ್ ಗಳನ್ನು ಸದನದ ಮುಂದೆ ಇಡದೇ ಅಧಿಕಾರಿಗಳು ಯಾವ ರೀತಿ ಆಡಳಿತ ಮಾಡುತ್ತಿದ್ದಾರೆ ಅಂದರೆ ಎಷ್ಟರ ಮಟ್ಟಿಗೆ ನಮ್ಮ ವಿಧಾನ ಸಭೆಯ ಅಧಿಕಾರವನ್ನು, ನಮ್ಮೆಲ್ಲರನ್ನೂ ಕತ್ತಲೆಯಲ್ಲಿಟ್ಟು, ಅಧಿಕಾರಿಗಳು ನಡೆಸಿಕೊಂಡು ಹೋಗುತ್ತಿದ್ದಾರೆ, ಇದು ಕಾನೂನುಬಾಹಿರ ಅಲ್ಲವೇ? ಇದಕ್ಕೆ ಯಾರು ಜವಾಬ್ದಾರರು? ಅಂದರೆ ತಾವು ಸರ್ಕಾರ ಏನು ನಡೆಸುತ್ತಿದ್ದೀರಿ, ತಾವು ಇದಕ್ಕೆ ಹೊಣೆ ಅಲ್ಲವೇ ಎನ್ನುವುದನ್ನು ನಾನು ಕೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ಇದು ವಿಚಾರ ಮಾಡಿದರೆ ಎಲ್ಲಾ ಮಂತ್ರಿಗಳಿಗೂ ಸಂಬಂಧವಿದೆ. ಅವರ್ಯಾರಿಗೂ ಲಕ್ಷ್ಯವೇ ಇಲ್ಲ. ಬೇರೆ ಬೇರೆ ವಿಷಯಗಳಲ್ಲಿ ಚರ್ಚೆ ಮಾಡುತ್ತಾ ಕುಳಿತಿರುತ್ತಾರೆ. ಇದು ಎಲ್ಲಾ ಮಂತ್ರಿಗಳಿಗೂ ಸಂಬಂಧಪಟ್ಟಿದ್ದು. ಅವರಿಗೆ ಏನೂ ಸಂಬಂಧ ಇಲ್ಲ ಎನ್ನುವ ರೀತಿಯಲ್ಲಿದ್ದಾರೆ. ನಮ್ಮ ನಾಯಕರು ಮಾತನಾಡುತ್ತಿದ್ದಾರೆ. ಅದೂ ಬಹಳ ಮಹತ್ವದ್ದು, ಎಲ್ಲರೂ ತಿಳಿದುಕೊಳ್ಳತಕ್ಕಂಥಾದ್ದು, ಆ ಕಡೆ ಲಕ್ಷ್ಯವೇ ಇಲ್ಲ. ಬೇರೆ ಏನೋ ಮಾತನಾಡುತ್ತಿದ್ದಾರೆ.

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೇ, ಇಂತಹ ಮಹತ್ವವಾದ ವಿಚಾರವನ್ನು ತೆಗೆದಿದ್ದರಲ್ಲಾ ನಿಮ್ಮ ನಾಯಕರು, ಆ ಬಗ್ಗೆ ಚಿಂತೆ ಮಾಡುತ್ತಿದ್ದೇವೆ. ಇದಕ್ಕೆ ಯಾವ ರೀತಿ ಉತ್ತರ ಕೊಡಬೇಕು ಎಂದು. ನಾವು ಆಳವಾಗಿ ಚಿಂತೆ ಮಾಡುತ್ತಿದ್ದೇವೆ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೇ, ಎಲ್ಲಾ ಮಂತ್ರಿಗಳು, ತಮ್ಮ ತಮ್ಮ ಅಧೀನದಲ್ಲಿರತಕ್ಕಂಥ ಕಾರ್ಯದರ್ಶಿಗಳು, ತಮ್ಮ ತಮ್ಮ ಅಧೀನದಲ್ಲಿರತಕ್ಕಂಥ ಮುಖ್ಯಸ್ಥರುಗಳು ಯಾವ ರೀತಿ ಕೆಲಸ ಮಾಡುತ್ತಿದ್ದಾರೆ ಯಾವ ರೀತಿ ನಿಯಂತ್ರಣ ಇಟ್ಟುಕೊಂಡಿದ್ದಾರೆ ಎನ್ನುವುದನ್ನು ನಾವೂ ಯೋಚನೆ ಮಾಡಬೇಕು, ನೀವೂ ಯೋಚನೆ ಮಾಡಬೇಕು. ನಾವು ಕೇವಲ ಶಾಸನ ಮಾಡತಕ್ಕಂಥಾದ್ದು ಒಂದೇ ಅಲ್ಲ. ಆ ಶಾಸನ ಮಾಡಿ ನಿಯಮಾವಳಿಗಳನ್ನು ಸಹಜವಾಗಿ ಮಾನ್ಯ ಅಧ್ಯಕ್ಷರೇ ನಮಗೆಲ್ಲಾ ಗೊತ್ತಿರುವ ಹಾಗೆ ಪಾರ್ಲಿಮೆಂಟ್ ನಲ್ಲಿ ಮಾಡಿದ ಹಾಗೆ ಆಕ್ಟ್ ನ್ನು ನಾವು ಏನು ಇಲ್ಲಿಗೆ ತರುತ್ತೇವೆ ಅದರ ಜೊತೆಯಲ್ಲಿಯೇ ರೂಲ್ಸ್ ಮಾಡಿ ತರತಕ್ಕಂಥ ಪದ್ಧತಿ ಇದೆ. Rules are also being framed by the Legal Department and placed before the Assembly. ಅದಲ್ಲದೆ ಇವತ್ತು ನಾವು ಆಕ್ಟ್ ಪಾಸ್ ಮಾಡುತ್ತೇವೆ. ಎಷ್ಟೋ ವರ್ಷಗಳ ಕಾಲ ಅದು ರೂಲ್ಸ್ ಆಗುವುದಿಲ್ಲ. ಆ ರೂಲ್ಸ್ ಆದದ್ದನ್ನು 15 ದಿವಸಗಳ ಒಳಗಾಗಿ ಇಲ್ಲಿ ಇಡಬೇಕೆನ್ನುವ

ನಿಯಮ ಇದೆ. ಅದೂ ಇಡುತ್ತಿಲ್ಲ. ಹಾಗೇ ಲೆಕ್ಕ ಹಾಕಿಕೊಂಡರೆ ಈ ಸರ್ಕಾರದ ಪ್ರತಿಯೊಬ್ಬ ಮಂತ್ರಿಗಳೂ ಇವತ್ತು ಹಕ್ಕುಚ್ಯುತಿಗೆ ಅರ್ಹರಾಗಿರುತ್ತಾರೆ. ನಾವು ನಿಜವಾಗಿಯೂ ಕಾನೂನುಬದ್ಧವಾಗಿ ಹಕ್ಕುಚ್ಯುತಿಯನ್ನು ನಿಮ್ಮ ಮೇಲೆ ಮಂಡಿಸಿದರೆ ಬಹುತೇಕ ಮಂತ್ರಿಗಳು ಈ ಸರ್ಕಾರವೇ ಹಕ್ಕುಚ್ಯುತಿ ಮಾಡಿದೆ ಎನ್ನತಕ್ಕಂಥ ಒಂದು ಕಷ್ಟಕ್ಕೆ ಸಿಕ್ಕಿಹಾಕಿಕೊಳ್ಳುತ್ತೀರಿ. ಬಹುತೇಕ ಈ ರೀತಿ ಎಲ್ಲಿ ನಡೆಯುತ್ತಿದೆ ಅಂದರೆ ಆರ್ಥಿಕ ಇಲಾಖೆಯ ಅಧಿಕಾರಿಗಳು ಅದು ಎಕ್ಸೈಜ್ ಇಲಾಖೆ ಇರಬಹುದು, ಕಮರ್ಷಿಯಲ್ ಟ್ಯಾಕ್ಸ್ ಇಲಾಖೆ ಇರಬಹುದು ಈ ಇಲಾಖೆಗಳಲ್ಲಿ ತಾವು ಎಷ್ಟೋ ರಿಯಾಯಿತಿಗಳನ್ನು ಕೊಡುತ್ತೀರಿ, ಸರ್ಕಾರ, ಆ ರೀತಿಯ ರಿಯಾಯಿತಿಗಳನ್ನು ಕೊಡುವಾಗ ನೋಟಿಫಿಕೇಶನ್ಸ್ ಇಶ್ಯೂ ಮಾಡುತ್ತೀರಿ ಅಥವಾ ಯಾವುದಾದರೊಂದು ನಿಯಮಾವಳಿ ಮಾಡುವಾಗ ಆ ನೋಟಿಫಿಕೇಶನ್ಸ್ ಇಶ್ಯೂ ಮಾಡುತ್ತೀರಿ. ಅದನ್ನು ಅಧೀನ ಕಾರ್ಯದರ್ಶಿಯೋ ಅಥವಾ ಉಪ ಕಾರ್ಯದರ್ಶಿಯೋ ಇಟ್ಟುಕೊಂಡು ಕುಳಿತುಕೊಳ್ಳುತ್ತಾರೆ. ಸುಮಾರು 5–6 ತಿಂಗಳುಗಳ ಕಾಲ ಅದನ್ನು ತಡೆಹಿಡಿದಿರುತ್ತಾರೆ. ಆ ರೀತಿ ತಡೆಹಿಡಿದು ಅದಕ್ಕೆ ಸಂಬಂಧಪಟ್ಟ ಫಲಾನುಭವಿಗಳು ಯಾರಿದ್ದಾರೆ ಅವರಿಗೂ ಇವರಿಗೂ ಹೊಂದಾಣಿಕೆ ಮಾಡಿಕೊಂಡು ಅದು ಹಾಗೆಯೇ ನಿಂತಿರುತ್ತದೆ; ನೋಟಿಫಿಕೇಶನ್ ಹೊರಗಡೆ ಬರುವುದಿಲ್ಲ. ಇಲ್ಲಿ 2–3 ವರ್ಷಗಳಾದರೂ ವಿಧಾನ ಸಭೆ ಮುಂದೆ ಬರುವುದಿಲ್ಲ. ಅದರಲ್ಲಿ ಯಾವ ರೀತಿಯ ವಿಚಾರ ಇದೆ, ಯಾವ ಒಂದು ಮಹತ್ವ ಇದೆ ಏನು ನೀವು ಬೆನಿಫಿಟ್ ಕೊಡುತ್ತಿದ್ದೀರಿ ಅದು ಯಾವುದೂ ಚರ್ಚೆಯಾಗುವುದಿಲ್ಲ ಈ ರೀತಿ ಇವತ್ತು ನಡೆದುಕೊಂಡು ಬರುತ್ತಿದೆ. ಇವತ್ತು ಪ್ರಜಾಪ್ರಭುತ್ವದ ಒಂದು ನೀತಿಗೆ ಅನುಗುಣವಾಗಿ ಯಾವ ಒಂದು ಆಡಳಿತ, ಸರ್ಕಾರದ ಮಂತ್ರಿಗಳಾಗಲಿ ಅಥವಾ ನಾವು ವಿರೋಧ ಪಕ್ಷದವರು ಆಗಲಿ ಕೆಲಸ ಮಾಡುತ್ತಿದ್ದೇವೆ ಎನ್ನತಕ್ಕಂಥ ಅನುಮಾನ ನಮಗೆ ಬರುತ್ತಿದೆ. ಇವತ್ತು ಇಷ್ಟು ವರ್ಷಗಳ ಕಾಲ ಮೂರು ವರ್ಷ, ಎಡರೂವರೆ ವರ್ಷ, ಮೂರು ವರ್ಷ ಎಂಟು ತಿಂಗಳು ಈ ರೀತಿ ಒಂದು ನಿಯಮಾವಳಿಗಳು ರಚನೆಯಾಗಿ ಈ ಸದನಕ್ಕೆ ಬಂದಿಲ್ಲವೆಂದು ಹೇಳಿದರೆ ಹೇಗೆ? ಕಾನೂನುಬದ್ಧವಾಗಿ 15 ದಿವಸಗಳೊಳಗಾಗಿ ಸದನದ ಮುಂದೆ ಇಡಬೇಕು. ಇಲ್ಲ ಅಂದರೆ ಮುಂದಿನ ಸಲ ಅಧಿವೇಶನ ಕರೆದಾಗ ಅದನ್ನು ಇಡಬೇಕು. ಅದೂ ಇಲ್ಲದೇ ಇಷ್ಟೊಂದು ನಡೆದಿದೆ ಅಂದರೆ ನಾವೆಲ್ಲರೂ ಎಷ್ಟು ಕಾರಣಕರ್ತರಾಗಿದ್ದೇವೆ, ನಾವು ಎಷ್ಟು ಅಪಚಾರವನ್ನು ಎಸೆಗುತ್ತಿದ್ದೇವೆ ನಮ್ಮ ಪ್ರಜಾಪ್ರಭುತ್ವದ ಸಿದ್ಧಾಂತಕ್ಕೆ, ಈ ಜನತೆಗೆ ನಾವು ಎಷ್ಟು ಅನ್ಯಾಯವನ್ನು ಮಾಡುತ್ತಿದ್ದೇವೆ ಎಂದು ನಮಗೆ ಒಂದು ರೀತಿ ನಾಚಿಕೆಯಾಗುತ್ತಿದೆ. ಅದರಲ್ಲೂ ಅನೇಕ ಸಲ ಈ ವಿಚಾರ ಅಧೀನ ಶಾಸನ ರಚನಾ ಸಮಿತಿಯಲ್ಲಿ ಚರ್ಚೆಯಾಗಿದೆ. ಚರ್ಚೆಯಾಗಿ ಮುಖ್ಯ ಕಾರ್ಯದರ್ಶಿಗಳು 1999ನೇ ಇಸವಿಯಲ್ಲಿ ಒಂದು ಸುತ್ತೋಲೆಯನ್ನು ಹೊರಡಿಸಿದ್ದಾರೆ. 1999ನೇ ಇಸವಿಯಲ್ಲಿ ಏನು ಹೊರಡಿಸಿದ್ದಾರೆ? ಸರ್ಕಾರದವರು ಹೊರಡಿಸಿರುವ ಆದೇಶ, ಅಧಿಸೂಚನೆಗಳು ಮುಂತಾದವುಗಳನ್ನು ಇಲಾಖೆಗಳು ವಿಧಾನ ಮಂಡಲದಲ್ಲಿ ಕೂಡಲೇ ಮಂಡಿಸಿ ಕಳುಹಿಸಿಕೊಡದೇ ಅತಿ ವಿಳಂಬವಾಗಿ ಕಳುಹಿಸುತ್ತಿರುವುದನ್ನು ಗಮನಿಸಿದ ಸಮಿತಿಯು ಅವುಗಳು ಸಮಿತಿಯ ಗಮನಕ್ಕೆ ಬರುವ ವೇಳೆಗೆ ಅದರ ಪ್ರಾಮುಖ್ಯತೆ ಕಳೆದುಕೊಳ್ಳುತ್ತಿರುವುದರಿಂದ ಸಮಿತಿಯು ತೀವ್ರ ಆಕ್ಷೇಪಣೆ ವ್ಯಕ್ತಪಡಿಸಿದೆ. 1997ನೇ ಇಸವಿಯ ಮತ್ತು ಕೆಲವು ಹಿಂದಿನ ಅಧಿಸೂಚನೆ ಮತ್ತು ಆದೇಶಗಳನ್ನು ಹಾಲಿ ಅಧಿವೇಶನದಲ್ಲಿ ವಿಧಾನ ಮಂಡಲದ ಮುಂದೆ ಮಂಡಿಸಲು ಕಳುಹಿಸಿರುವುದು

ಸಮಿತಿಯ ಗಮನಕ್ಕೆ ಬಂದಿದೆ. ಅಧಿನಿಯಮದಲ್ಲಿನ ಅವಕಾಶಗಳಂತೆ ಕಾಲಕಾಲಕ್ಕೆ ಹೊರಡಿಸಿದ ಆದೇಶ, ಅಧಿಸೂಚನೆ ನಿಯಮ, ತಿದ್ದುಪಡಿ ನಿಯಮ ಮುಂತಾದವುಗಳನ್ನು, ಅವುಗಳನ್ನು ಹೊರಡಿಸಿದ ತಕ್ಷಣ ರಾಜ್ಯವಿಧಾನ ಮಂಡಲದಲ್ಲಿ ಮಂಡಿಸಲು ಕಳುಹಿಸದಿರುವುದು ನಿಯಮಬಾಹಿರವಾಗಿರುತ್ತದೆ. ಈ ರೀತಿ ಎರಡು ಮೂರು ವರ್ಷಗಳ ನಂತರ ತಡವಾಗಿ ಕಳುಹಿಸಿರುವ ಆದೇಶ, ಅಧಿನಿಯಮಗಳ ಬಗ್ಗೆ ಚರ್ಚಿಸುವುದರಲ್ಲಿ ಅರ್ಥವಿಲ್ಲವೆಂದು ಸಮಿತಿ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತದೆ. ಸಮಿತಿಯು ವ್ಯಕ್ತಪಡಿಸಿರುವ ಅಭಿಪ್ರಾಯದ ಹಿನ್ನೆಲೆಯಲ್ಲಿ ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿಗಳು ಅವರವರ ವ್ಯಾಪ್ತಿಗೆ ಬರುವ ಅಧಿಕಾರಿಗಳಿಗೆ ಮತ್ತು ಆಡಳಿತ ಇಲಾಖೆಗೆ ಕಟ್ಟುನಿಟ್ಟಾಗಿ ಮೇಲಿನ ವಿಷಯವನ್ನು ತಿಳಿಸಿ ಈ ಬಗ್ಗೆ ಪಾಲನಾ ವರದಿಯನ್ನು ಅಧೀನ ಶಾಸನ ರಚನಾ ಸಮಿತಿಯ ವ್ಯಾಪ್ತಿಗೆ ಕಳುಹಿಸಿ ಅದರ ಪ್ರತಿಯನ್ನು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಸಮಿತಿಯ ಇಲಾಖೆಗೆ ಕಳುಹಿಸಿಕೊಡುವಂತೆ ಸೂಚಿಸಲಾಗಿದೆ. ಇದು 1999ನೇ ಸಾಲಿನಲ್ಲಿ ಮುಖ್ಯ ಕಾರ್ಯದರ್ಶಿಗಳು ಎಲ್ಲಾ ಇಲಾಖೆಗಳ ಮುಖ್ಯಸ್ಥರಿಗೆ ಸೂಚನೆ ಕೊಟ್ಟಿದ್ದರೂ ಈಗ 2003ರ ಆಗಸ್ಟ್ ತಿಂಗಳಿಗೆ ನಾವು ಬಂದಿದ್ದೇವೆ. ಈ 2003ನೇ ಆಗಸ್ಟ್ ಬಂದರೆ ಇವತ್ತು ನೀವು ಕೆಲವು ನೋಟಿಫಿಕೇಶನ್‌ಗಳನ್ನು ಇಡುತ್ತಿದ್ದೀರಿ, ಅಂದರೆ ಒಂದು ವೇಳೆ ಆ ನೋಟಿಫಿಕೇಶನ್‌ಗಳನ್ನು ತಕ್ಷಣ ತಂದು ಇಟ್ಟು ಅದರಲ್ಲಿ ಏನಾದರೂ ತಿದ್ದುಪಡಿಗಳು ಇದ್ದರೆ ನಾವು ವಿಧಾನಸಭಾ ಸದಸ್ಯರುಗಳು ಚರ್ಚೆ ಮಾಡಿ ಸಲಹೆ ಕೊಡಬಹುದು, ಅದನ್ನು ಮಾರ್ಪಾಡು ಮಾಡತಕ್ಕಂಥ ಅವಕಾಶ ಇದೆ. ಇವತ್ತು ಏನಾಗಿದೆ ಎಂದರೆ, ಎಷ್ಟು ರಾದ್ಧಾಂತವಾದರೂ ಚಿಂತೆ ಇಲ್ಲ, ನೋಟಿಫಿಕೇಶನ್‌ಗಳಲ್ಲಿ ಎಷ್ಟು ಅವ್ಯವಹಾರವಾದರೂ ಚಿಂತೆ ಇಲ್ಲ, 2–3 ವರ್ಷಗಳಾದ ಮೇಲೆ ಆ ನೋಟಿಫಿಕೇಶನ್‌ಗಳನ್ನು ಪ್ರಾಸ್ತಾವಿಕವಾಗಿ ಇಡುತ್ತಾರೆ, ಮಂಜೂರಾಯಿತು ಎಂದು ತೆಗೆದುಕೊಂಡು ಹೋಗುತ್ತಾರೆ. ಇಂತಹ ಒಂದು ಪರಿಸ್ಥಿತಿ ಬಂದಿದೆ. ಅದಕ್ಕೆ ನಾನು, ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ, ಒಟ್ಟಿನಲ್ಲಿ ಈ ಸರ್ಕಾರ ಅದರಲ್ಲೂ ಹೆಚ್ಚಾಗಿ ನಿಮ್ಮ ಸರ್ಕಾರ ಬಂದಮೇಲೆ ಸುಮಾರು 2000ನೇ ಇಸವಿಯಿಂದ ಇಲ್ಲಿಯವರೆಗೆ ಒಂದು ಮಹತ್ವವಾದ ನೋಟಿಫಿಕೇಶನ್ ಎಲ್ಲಿದೆ? ಎಲ್ಲಿ ನೀವು ಎಕ್ಸೈಜ್ ಇಲಾಖೆಯವರಿಗೆ ತೆರಿಗೆ ರಿಯಾಯಿತಿ ಏನು ಕೊಡುತ್ತೀರಿ ಕಮರ್ಷಿಯಲ್ ಇಲಾಖೆಯವರಿಗೆ ಏನು ತೆರಿಗೆ ರಿಯಾಯಿತಿಯನ್ನು ಕೊಡುತ್ತೀರಿ; ಇಂತಹ ಸುಮಾರು 80ರಷ್ಟು ನೋಟಿಫಿಕೇಶನ್ಸ್ ಇವೆ. ಈ ಎಲ್ಲಾ ನೋಟಿಫಿಕೇಶನ್‌ಗಳನ್ನು ಎರಡು ವರ್ಷ, ಮೂರು ವರ್ಷ ಎರಡೂವರೆ ವರ್ಷ ತಡವಾಗಿ ಇವತ್ತು ಸದನದಲ್ಲಿ ಮಂಡಿಸುತ್ತಿದ್ದೀರಿ. ಇದು ನಿಜವಾಗಿಯೂ ಘೋರ ಅಪರಾಧ ಎಂದು ನಾನು ಹೇಳುತ್ತಾ, ಅದೇ ಸಂಬಂಧವಾಗಿ ಇವತ್ತು ಆನ್‌ಲೈನ್ ಲಾಟರಿ ಬಗ್ಗೆ 2001ರಲ್ಲಿ ನೋಟಿಫಿಕೇಶನ್ ಹೊರಡಿಸಿದ್ದೀರಿ. ಅದನ್ನೂ ಸಹ ಇವತ್ತು ಇಡುತ್ತಿದ್ದೀರಿ. 15 ದಿವಸಗಳೊಳಗಾಗಿ ಇಡಬೇಕಾಗಿತ್ತು, ಆಗ ಇಟ್ಟಿದ್ದರೆ ಎಷ್ಟೋ ಸಲಹೆ ಸೂಚನೆಗಳನ್ನು ನಾವು ಕೊಟ್ಟು ತಿದ್ದುಪಡಿಗಳನ್ನು ತರಬಹುದಾಗಿತ್ತು, ಅಥವಾ ಆ ನೋಟಿಫಿಕೇಶನ್ ಅನ್ನು ವಿತ್‌ಡ್ರಾ ಮಾಡಿ ಎಂದು ಹೇಳಬಹುದಾಗಿತ್ತು. ಆದರೆ ಇವತ್ತು ಆ ಅನ್ ಲೈನ್‌ಲಾಟರಿ ಜಾರಿಗೆ ಬಂದು ಕೋಟ್ಯಾಂತರ ರೂಪಾಯಿ ಲೂಟಿಯಾಗುತ್ತಿದೆ. ಸಾರ್ವಜನಿಕರ ತಲೆ ಮೇಲೆ ಕಲ್ಲು ಎಳೆದು ಅವರೆಲ್ಲಾ ನಾವು ಇವತ್ತು ಸ್ಮಶಾನಕ್ಕೆ ಹೋಗುತ್ತಿದ್ದಾರೆ; ಜನ ಹುಚ್ಚರಾಗುತ್ತಿದ್ದಾರೆ. ಇಂತಹ ಒಂದು ಮಹತ್ವವಾದ ನೋಟಿಫಿಕೇಶನ್ ಅನ್ನು ಎರಡು ವರ್ಷದ

ನಂತರ ಇಡುತ್ತಿದ್ದೀರಿ. ಅದನ್ನು ನಾನು ವಿರೋಧ ಮಾಡುತ್ತಾ ಅದರಲ್ಲಿ ಎಷ್ಟು ನ್ಯೂನತೆಗಳು ಇವೆ, ಅದರಲ್ಲಿ ಎಷ್ಟು ಅನ್ಯಾಯಗಳಿವೆ ಎನ್ನತಕ್ಕಂಥಾದ್ದನ್ನು ಈ ಸಂದರ್ಭದಲ್ಲಿ ನಾನು ಈ ಸದನದ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತಿದ್ದೇನೆ. ಈ ಆನ್ ಲೈನ್ ಲಾಟರಿ ನಮ್ಮ ಸಮಾಜದ ಒಂದು ಪಿಡಗು. ಇದು ಒಂದು ರೋಗಗ್ರಸ್ಥ ನೋಟಿಫಿಕೇಶನ್. ಇದರ ಬಗ್ಗೆ ನಾನು ಕಳೆದ ಅಧಿವೇಶನದಲ್ಲಿಯೇ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇನೆ, ಮಾನ್ಯ ಸುರೇಶ್ ಕುಮಾರ್‌ರವರು ವಿವರವಾಗಿ ಇದರಿಂದ ಏನು ಅನಾಹುತಗಳಾಗುತ್ತವೆ ಎನ್ನುವುದನ್ನು ಹೇಳಿದ್ದಾರೆ. ಈ ವಿಚಾರದಲ್ಲಿ ನಮ್ಮ ಶ್ರೀಮಾನ್ ಜಯಪ್ರಕಾಶ್ ಹೆಗಡೆಯವರು ಮಾತನಾಡಿದ್ದಾರೆ. ಮೊದಲು ನಮ್ಮ ರಾಜ್ಯದಲ್ಲಿ ಲಾಟರಿ ಟಿಕೆಟ್ ವ್ಯವಸ್ಥೆ ಇತ್ತು. ಲಾಟರಿ ಟಿಕೆಟ್ ಅಂದರೆ ಸುಮಾರು ಒಂದು ತಿಂಗಳಿಗೆ ಒಂದು ಸಲ, 15 ದಿವಸಗಳಿಗೆ ಒಂದು ಸಲ 2 ರೂಪಾಯಿ ಕೊಟ್ಟು ಟಿಕೆಟ್ ತೆಗೆದುಕೊಂಡು ಡ್ರಾ ಆಗುತ್ತಿತ್ತು. ಅದು ಹೇಗೋ ಒಂದು ರೀತಿ ನಡೆದುಕೊಂಡು ಹೋಗುತ್ತಿತ್ತು. ಅದಾದ ಮೇಲೆ ಅದರ ಬಗ್ಗೆ ಸರ್ಕಾರ ಏನು ಹೇಳುತ್ತಿದೆ. ಅದರಲ್ಲಿ ಕೇವಲ ಒಂದು ವರ್ಷಕ್ಕೆ 15 ಕೋಟಿ ರೂಪಾಯಿ ಮಾತ್ರ ಬರುತ್ತಿತ್ತು. ಇವತ್ತು ಅನ್‌ಲೈನ್ ಲಾಟರಿ ಬಂದಮೇಲೆ 5 ವರ್ಷಗಳಲ್ಲಿ ಸುಮಾರು ಒಂದು ಸಾವಿರ ಕೋಟಿ ರೂಪಾಯಿ ಬರುತ್ತದೆ. ಆದ್ದರಿಂದ ಆನ್ ಲೈನ್ ಲಾಟರಿ ಅಂದರೆ ಕಂಪ್ಯೂಟರೈಜ್ಡ್ ಗ್ಯಾಂಬ್ಲಿಂಗ್. ಅದನ್ನು ನಾವು ತಂದಿದ್ದೇವೆ. ಇದರಿಂದ ಸರ್ಕಾರಕ್ಕೆ ಆದಾಯ ಬರುತ್ತದೆ ಎನ್ನುವ ಒಂದೇ ಒಂದು ಸಮಜಾಯಿಷಿಯನ್ನು ನಮ್ಮ ಸಾರ್ವಜನಿಕರಿಗೆ ಮತ್ತು ರಾಜ್ಯದ ಜನತೆಗೆ ಕೊಡುತ್ತಿದ್ದಾರೆ.

ಆದರೆ, ಇದರ ಒಳಗಡೆ ಏನು ಮೋಸ ಇದೆ, ಏನು ಅನ್ಯಾಯ ಇದೆ, ಎಷ್ಟು ಸೋರಿಕೆ ಇದೆ, ಇದರಿಂದ ಸಮಾಜದ ಮೇಲೆ ಆಗತಕ್ಕಂಥ ಅನಾಹುತಗಳೇನು, ಇದರ ಬಗ್ಗೆ ನಾವು ಒಳಹೊಕ್ಕು ನೋಡಿದಾಗ ನಮಗೆ ಇದರ ತೀವ್ರತೆ ಅರ್ಥವಾಗುತ್ತದೆ. ಆನ್‌ಲೈನ್ ಲಾಟರಿ ಎಂದರೆ, ಥ್ರೀ ಡಿಜಿಟ್ ಲಾಟರಿ. ಅಂದರೆ ಮೂರು ಅಂಕಿ ಲಾಟರಿ. ಇದನ್ನು ಅಲ್ಟಾ ಏಜೆನ್ಸಿಗೆ ಕೊಟ್ಟಿದ್ದಾರೆ. ಅಲ್ಟಾ ಏಜೆನ್ಸಿ ಎಂದರೆ, ಝೀ ಕಂಪನಿಯವರ ಒಂದು ಭಾಗ. ಇವರು ಮೂರು ಅಂಕಿ ಲಾಟರಿ ಮಾಡತಕ್ಕಂಥಾದ್ದಕ್ಕೆ ಅನುಮತಿಯನ್ನು ಕೊಟ್ಟಿದ್ದಾರೆ. ಅಂದರೆ ಇದು, throught country ನಡೆಯುತ್ತದೆ. ನಮ್ಮ ರಾಜ್ಯದ ಅನುಮತಿ ಪಡೆದು ಇಡೀ ದೇಶಾದ್ಯಂತ ನಡೆಸತಕ್ಕಂಥ ಒಂದು ವ್ಯವಹಾರ. ಇದರ ಬಗ್ಗೆ ಹೋದಸಾರಿ ಆ ಒಂಭತ್ತು ಬಾಲ್‌ಗಳಲ್ಲಿಯೂ ಸಹ ಮೋಸ ನಡೆಯುತ್ತಾ ಇದೆಯೆಂದು ಹೇಳಿದರು. ಈ ಬಾಲ್ಸ್ ಎಂದು ಏನಿದೆ, ಅದನ್ನು ಕಂಟ್ರೋಲ್ ಮಾಡುವುದು ಬಾಂಬೆ ಆಫೀಸಿನಲ್ಲಿದೆ. ಇಲ್ಲಿ ಬಟನ್ ಒತ್ತಿದ ತಕ್ಷಣ, ಒಂಭತ್ತು ಬಾಲ್ಸ್‌ನಲ್ಲಿ ಕೆಲವೇ ಬಾಲ್‌ಗಳು ರೊಟೇಟ್ ಆಗುತ್ತವೆ, ಅದು ಮೇಲೆ ಹೋಗಿ ಯಾರು ಹೆಚ್ಚು ಟಿಕೆಟ್ ಮಾರಿರುತ್ತಾರೆ, ಆ ಬಾಲ್‌ಗಳು ಮೂವ್ ಆಗುವುದೇ ಇಲ್ಲ, ಕೆಳಗಡೆಯೇ ಇರುತ್ತವೆ. ಅದರಿಂದ, ಬಹಳ ಮೋಸ ನಡೆಯುತ್ತಾ ಇದೆ ಎಂಬುದು ಸಾರ್ವಜನಿಕವಾಗಿ ಬಂದಿರತಕ್ಕಂಥ ಟೀಕೆ. ಇದನ್ನು ಚೆಕ್ ಮಾಡುವುದಕ್ಕೆ ನಿಮ್ಮ ಯಾವ ಅಧಿಕಾರಿಗಳೂ ಬಾಂಬೆ ಸರ್ವರ್ ಹತ್ತಿರ ಹೋಗಿಲ್ಲ. ಯಾವ ಡಿಪಾರ್ಟಮೆಂಟ್ ಅಧಿಕಾರಿಗಳೂ ಹೋಗಿಲ್ಲ. ಅದು ಒಂದು ಕಡೆ ನಡೆಯುತ್ತಾ ಇರಬಹುದು. ಅದರಲ್ಲಿ ಮೊದಲ ಬಹುಮಾನ ನಾಲ್ಕು ಸಾವಿರ ರೂಪಾಯಿ, ಎರಡನೇ ಬಹುಮಾನ ನಾಲ್ಕುನೂರು ರೂಪಾಯಿ, ಆಮೇಲೆ ಇನ್ನೂರು ರೂಪಾಯಿ, ಆಮೇಲೆ 50 ರೂಪಾಯಿ ಎಂದು ಇಟ್ಟಿರುತ್ತಾರೆ. ಹತ್ತು ರೂಪಾಯಿಗಳಿಗೆ ಒಂದು ಟಿಕೆಟ್ ತೆಗೆದುಕೊಂಡರೆ

ಈ ಆನ್‌ಲೈನ್ ಲಾಟರಿಯಲ್ಲಿ ಈ ರೀತಿ ಬಹುಮಾನಗಳನ್ನು ಇಟ್ಟಿರುತ್ತಾರೆ. ಇದನ್ನು ಡ್ರಾ ಮಾಡುವುದಕ್ಕೂ ಒಂದು ಕಮಿಟಿ ಇದೆ. ಆ ಕಮಿಟಿಯಲ್ಲಿ ಇಬ್ಬರು ಅಧಿಕಾರಿ ಸದಸ್ಯರುಗಳು, ಇಬ್ಬರು ಅಧಿಕಾರೇತರ ಸದಸ್ಯರು, ಸರ್ಕಾರ ನಾಮಿನೇಟ್ ಮಾಡತಕ್ಕಂಥಾದ್ದು ಇವರು ಇರುತ್ತಾರೆ. ಪ್ರತಿ ಸಾರಿ ಡ್ರಾ ದಿವಸ ಹೋಗಿ ಡ್ರಾ ಮಾಡತಕ್ಕಂಥಾದ್ದು. ಇದರಲ್ಲಿ ಏನಿದೆ, ದಿನದಲ್ಲಿ 6 ಗಂಟೆಯಲ್ಲಿ ಶುರುವಾದರೆ, ರಾತ್ರಿ 9 ಗಂಟೆಯವರೆಗೆ ಈ ಲಾಟರಿ ಟಿಕೆಟ್ ನಡೆಯುತ್ತಲೇ ಇರುತ್ತದೆ. ಅದಾದ ತಕ್ಷಣ ನಿಯಮಾವಳಿಗಳ ಪ್ರಕಾರ ರಾತ್ರಿ 9–40ಕ್ಕೆ ಡ್ರಾ ಆಗುತ್ತದೆ. ಈ ರೀತಿ ಡ್ರಾ ಆದಮೇಲೆ, ಬಾಂಬೆಯಲ್ಲಿ ಫಲಿತಾಂಶವನ್ನು ಡಿಕ್ಲೇರ್ ಮಾಡಬೇಕು. ಅಲ್ಲಾ ಕಂಪನಿಯವರಿಗೆ ಅಲ್ಲಿ, ಯಾರು ಗೆದ್ದಿದ್ದಾರೆ ಎಂಬುದು ಕೂಡಲೇ ಗೊತ್ತಾಗುತ್ತದೆ. ಅದರಲ್ಲಿ ಯಾವ ಅಧಿಕಾರಿಗಳೂ ಯಾವ ರೀತಿ ಡ್ರಾ ಆಗಿದೆ ಎನ್ನುವುದನ್ನು ಹೇಳುತ್ತಾ ಇಲ್ಲ. ಅದರಲ್ಲಿ ಮೋಸ ನಡೆಯುತ್ತಿದೆ ಎಂಬುದು ಒಂದು ಕಡೆಯಾದರೆ, ಇನ್ನೊಂದು ಅದರಲ್ಲಿ ಇವರು ಹೇಳಿರತಕ್ಕಂಥಾದ್ದು ಒಂದು ಲಕ್ಕಿ ಥ್ರೀಯಂತೆ! ಅದು ಮೂರು ಅಂಕಿ ಲಾಟರಿ. ಮೊದಲ ಬಹುಮಾನ ನಾಲ್ಕು ಸಾವಿರ ರೂಪಾಯಿ. ಆಮೇಲೆ ಇದರಲ್ಲಿ 45 ಪರ್ಸೆಂಟ್ ಏನು ಬರುತ್ತದೆ, ಈ ದುಡ್ಡನ್ನು ಬಹುಮಾನ ವಿಜೇತರಿಗೆ ಕೊಡತಕ್ಕಂಥಾದ್ದು. ಈ ನಿಯಮಾವಳಿ ಇದೆ. ಆಮೇಲೆ, ಇದರಲ್ಲಿ ತಾವೇನು ಹೇಳಿದ್ದೀರಿ ಮೊದಲನೇ ವರ್ಷ ನೂರು ಕೋಟಿ ರೂಪಾಯಿ ಸರ್ಕಾರಕ್ಕೆ ಬರುತ್ತದೆ, ಎರಡನೇ ವರ್ಷ ಇನ್ನೂರು ಕೋಟಿ ರೂ. ಹೀಗೆ ಐದನೇ ವರ್ಷದ ಕೊನೆಯಲ್ಲಿ ಒಂದು ಸಾವಿರದ ತೊಂಭತ್ತು ಕೋಟಿ ರೂಪಾಯಿ ಸರ್ಕಾರಕ್ಕೆ ಆದಾಯ ಬರುತ್ತದೆ ಎಂಬುದು ನೀವು ಒಪ್ಪಿರುವ ವಿಚಾರ. ಸರ್ಕಾರಕ್ಕೆ ಹೆಚ್ಚು ಆದಾಯ ಬರುತ್ತಾ ಇದೆ, ಅದರಿಂದ, ಇದನ್ನು ನಾವು ನಡೆಸುತ್ತಾ ಇದ್ದೇವೆಂದು ಹೇಳುತ್ತಿದ್ದೀರಿ. ಇದನ್ನು ದೊಡ್ಡ ಪ್ರಚಾರ ಕೂಡ ಮಾಡುತ್ತಿದ್ದೀರಿ. working like a sales person ಮತ್ತು ಸರ್ಕಾರವೇ ಇದು ಉತ್ತಮವಾದಂಥ ಯೋಜನೆ, ಆದ್ದರಿಂದ ನಡೆಸುತ್ತಾ ಇದ್ದಾರೆಂದು ಹೇಳಿದೆ. ಇದರಿಂದ ಏನಾಗಿದೆಯೆಂದರೆ, ಮೊದಲನೇ ವರ್ಷಕ್ಕೆ ನೂರು ಕೋಟಿ ರೂಪಾಯಿ ಕೊಡಬೇಕು. ಈಗಾಗಲೇ ಒಂದು ವರ್ಷವಾಗಿದೆ. ಇದುವರೆಗೆ ಕೇವಲ 60 ಕೋಟಿ ರೂಪಾಯಿಗಳು ಮಾತ್ರ ಸರ್ಕಾರಕ್ಕೆ ಸಂದಾಯವಾಗಿದೆ ಎಂಬುದು ನನ್ನ ಒಂದು ಮಾಹಿತಿ. ಆದ್ದರಿಂದ ಈ ವರ್ಷದಲ್ಲಿ ಸರ್ಕಾರಕ್ಕೆ ಎಷ್ಟು ಕೋಟಿ ರೂಪಾಯಿ ಸಂದಾಯವಾಗಿ ಎಂಬುದನ್ನು ಹೇಳಬೇಕಾಗುತ್ತದೆ. ಇವತ್ತು ಡ್ರಾ ಆದರೆ within one day, the amount has to be paid to the Government. ಈ ನಿಯಮಾವಳಿಗಳ ಪ್ರಕಾರ ಒಂದೇ ದಿನದೊಳಗಾಗಿ, ಎಷ್ಟು ಹಣ ಸಂಗ್ರಹಣೆಯಾಗಿದೆ ಅದನ್ನು ಸರ್ಕಾರಕ್ಕೆ ಕಟ್ಟಬೇಕೆಂಬುದು ನಿಯಮಾವಳಿಗಳ ಪ್ರಕಾರ ಇದೆ.

ಅಧ್ಯಕ್ಷರು : ಮಾನ್ಯ ಸೋಮಶೇಖರ್‌ರವರೇ, ಈಗಾಗಲೇ 20 ನಿಮಿಷವಾಗಿದೆ.

ಶ್ರೀ ಬಿ. ಸೋಮಶೇಖರ್ : ಇದು ಬಹಳ ಸೂಕ್ಷ್ಮವಾದಂಥ ಮತ್ತು ಬಹಳ ಪ್ರಮುಖವಾದ ವಿಚಾರ. ಇದಕ್ಕೆ ಇನ್ನೂ ಬಹಳ ಕಾಲ ಬೇಕಾಗುತ್ತದೆ.

ಅಧ್ಯಕ್ಷರು : ಹಾಗಿದ್ದರೆ, ನೀವು ಒಂದು ಕೆಲಸ ಮಾಡಿ. ನಿಯಮಾವಳಿ 69ರ ಅಡಿಯಲ್ಲಿ ಅವರು ಕಳುಹಿಸಿದ್ದಾರಲ್ಲಾ, ಆ ರೀತಿ ನೀವೂ ಕಳುಹಿಸಿ.

ಶ್ರೀ ಬಿ. ಸೋಮಶೇಖರ್ : ಇದನ್ನೇ ಕನ್‌ವರ್ಟ್ ಮಾಡಿಕೊಳ್ಳಿ.

ಅಧ್ಯಕ್ಷರು : ಈ ಹಂತದಲ್ಲಿ ಕನ್‌ವರ್ಟ್ ಮಾಡಿಕೊಳ್ಳುವುದಕ್ಕಾಗುವುದಿಲ್ಲ. We have got some better business.

Sri B. Somashekar : I have already started the discussion.

ಅಧ್ಯಕ್ಷರು : ಸರ್ಕಾರದ ಕೆಲಸವೇ ಇದು?

ಇವತ್ತು ಸರ್ಕಾರಿ ಕೆಲಸ ಏನು ಮಾಡಿದ್ದೇವೆ? ಬೇಕಾದರೆ, ಎರಡು ಗಂಟೆಯವರೆಗೂ ಇದೇ ಆಗುತ್ತದೆ.

Sri S. Suresh Kumar : If is insulting a Member. ತಾವು ದಯವಿಟ್ಟು ಆ ಪದವನ್ನು ಹೇಳಬೇಡಿ.

ಅಧ್ಯಕ್ಷರು : ಬೆಳಿಗ್ಗೆ ಹತ್ತೂವರೆಯಿಂದ ಮೂರು ಗಂಟೆಯವರೆಗೂ ನಿಮ್ಮ ಬಿಸಿನೆಸ್ಸೇ ಮಾಡಿದರೆ, ಸರ್ಕಾರದ ಬಿಸಿನೆಸ್ ಮಾಡುವುದು ಬೇಡವೇ?

Sri S. Suresh Kumar : It is almost insulting a Member. we have got better business.

Mr. Speaker : I am not insulting. ಬೇಗ ಮುಗಿಸಿ ಎಂದು ಹೇಳುತ್ತಿದ್ದೇನೆ.

Sri B. Somashekar : According to me, there is no other better business than discussing about this evil scheme. I am sorey As a memner I have got right to move a Motion and withdrawing it and you can convert my ...

ಅಧ್ಯಕ್ಷರು : ಸರ್ಕಾರಿ ಬಿಸಿನೆಸ್ ಇದೆಯೆಂದು ತಮಗೆ ಹೇಳಿದೆ. ಇದನ್ನು ಈಗ ತೆಗೆದುಕೊಂಡರೆ ಇನ್ನೂ ಮೂರು ಗಂಟೆಯವರೆಗೂ ಆಗುತ್ತದೆ. ನಮಗೆ ಇನ್ನೂ ಸರ್ಕಾರೀ ಬಿಸಿನೆಸ್ ಇಲ್ಲವೇ?

Sri B. Somashekar : This is better business than that. I have moved a motion. Under Rule 69, I cannot take up this.

Mr. Speaker : I know that. No. It cannot be converted. ನಿಮ್ಮದೂ ಮಾಡೋಣ, ಅವರದೂ ಮಾಡೋಣ.

Sri B. Somashekar : I have moved for withdrawal. ಅದನ್ನು ಬೇಕಾದರೆ ತಾವು ವಿತ್ ಡ್ರಾ ಮಾಡಿ ಇಲ್ಲವೇ ಬಿಡಿ. I have to complete my discussion.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಸಭಾಧ್ಯಕ್ಷರೇ, ಇದು ಒಂದು ಮಸೂದೆಗೆ ಸಂಬಂಧಪಟ್ಟ ತಿದ್ದುಪಡಿ. If I have understood correctly ಈ ನಿಯಮಗಳಿಗೆ ತಿದ್ದುಪಡಿಯನ್ನು ತರುವುದು. ಸರ್ಕಾರ ನಿಯಮಗಳನ್ನು ರಚನೆ ಮಾಡುವಾಗಲೇ ಇವೆಲ್ಲಾ ಆಲೋಚನೆ ಮಾಡಿ ಹಾಕಿರುತ್ತೇವೆ. ಆ ನಿಯಮಗಳಿಗೆ ತಿದ್ದುಪಡಿ ತರತಕ್ಕಂಥಾದ್ದು ಒಂದು ಭಾಗ. ಆದರೆ, ತಾವೇನು ಹೇಳಿದಿರಿ, ನಿಯಮ 69ಕ್ಕೆ ಕನ್ ವರ್ಟ್ ಮಾಡಿ ಎಂದು, ಆದರೆ, ಇದನ್ನು ಕನ್‌ವರ್ಟ್ ಮಾಡುವುದಕ್ಕಾಗುವುದಿಲ್ಲ. You have to put to vote of this House. If the House rejects, the amendment falls to the ground. If, it is succeeded

then, amendment has to be inserted. ಇಷ್ಟೇ ಇರುವುದು. ಆದ್ದರಿಂದ ನಿಯಮ 69 ಕ್ಕೆ ಕನ್‌ವರ್ಟ್ ಮಾಡುವುದಕ್ಕಾಗುವುದಿಲ್ಲ. ಅವರು ಸಾಕಷ್ಟು ವಿಚಾರವನ್ನು ಹೇಳಿದ್ದಾರೆ. ಈ ವಿಚಾರದಲ್ಲಿ ಸರ್ಕಾರದ ನಿಲುವೇನು ಎಂದರು. ಇದರ ಜೊತೆಗೆ, ತಾವು ಇದನ್ನು ಯಾವ ನಿಯಮದಡಿಯಲ್ಲಿ ತೆಗೆದುಕೊಂಡಿದ್ದೀರೋ ನನಗಂತೂ ಗೊತ್ತಾಗುವುದಿಲ್ಲ. ಶೂನ್ಯವೇಳೆ ಎಂದು ಕರೆದರೆ.

ಅಧ್ಯಕ್ಷರು : ಇಲ್ಲ. ಸಭೆಯ ಮುಂದಿಡುವ ಕಾಗದ ಪತ್ರಗಳು ಎಂದಿದೆಯಲ್ಲಾ, ಅದರಲ್ಲಿ ಅವರು ಅಬ್ಜಕ್ಷನ್ ಎತ್ತಿದ್ದಾರೆ. ಇದರಲ್ಲಿ ಈ ಪೇಪರ್ ಲೇ ಮಾಡಕೂಡದು ಎಂದು ಆಕ್ಷೇಪಣೆ ಎತ್ತಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಅದಕ್ಕೆ, ಅವರು ಬರೀ ಒಂದು ಮೋಷನ್ ಮೂವ್ ಮಾಡಬಹುದೇ ಹೊರತು, ಅದರ ಮೇಲೆ ಸುಧೀರ್ಘವಾಗಿ ಭಾಷಣ ಮಾಡುತ್ತಾ.

ಅಧ್ಯಕ್ಷರು : ಅದಕ್ಕೋಸ್ಕರವೇ ನಾನು ಹೇಳಿದ್ದು. ಸಿಂಪಲ್ ಆಗಿ ಹೇಳಿ, ಟೈಮ್ ಸಾಲದು, ಇನ್ನೂ ಬೇಕಾದಷ್ಟು ವಿಷಯಗಳು ನಮ್ಮ ಮುಂದಿವೆ ಎಂದು ಹೇಳಿದ್ದು.

ಶ್ರೀ ಬಿ. ಸೋಮಶೇಖರ್ : ನಾನು ಜಸ್ಟಿಫೈ ಮಾಡುವುದು ಬೇಡವೇ?

ಅಧ್ಯಕ್ಷರು : ನೀವು ಜಸ್ಟಿಫೈ ಮಾಡುವುದಕ್ಕೆ 3–4 ಗಂಟೆ ಮಾತನಾಡಬಹುದು.

ಶ್ರೀ ಡಿ.ಬಿ. ಚಂದ್ರೇಗೌಡ : ಸಬಾರ್ಡಿನೇಟ್ ಲೆಜಿಸ್ಲೇಷನ್ ಕಮಿಟಿಯ ಕರ್ತವ್ಯಗಳೇನು, ಅವರೇನು ಶಿಫಾರಸ್ ಮಾಡಿರುತ್ತಾರೆ, ಅದನ್ನು ಸದನಕ್ಕೆ ಮಂಡಿಸಬೇಕು. ಸಂವೀಧಾನದತ್ತವಾಗಿ ಮಾಡಿರತಕ್ಕ ಶಾಸನಗಳು, ಶಾಸನ ಸಭೆಯಲ್ಲಿ ಇರತಕ್ಕ ಶಾಸನಗಳು, ಅದು ಪಾರ್ಲಿಮೆಂಟಿನಲ್ಲಿ ಮತ್ತೊಂದರಲ್ಲಿ ಮಾಡಿರತಕ್ಕ ಶಾಸನಗಳಿಗೆ ನಿಯಮಗಳನ್ನು ಸರ್ಕಾರ ರಚನೆ ಮಾಡಿದೆ. ಆ ನಿಯಮಗಳೇನಿವೆ ಅವು ಇದರ ವ್ಯಾಪ್ತಿಯಲ್ಲಿ ಬಂದರೂ ಕೂಡ, ಅವು ಇಲ್ಲೀಗಲ್ ಆಗುವುದಿಲ್ಲ. ಬೇಕಾದಷ್ಟು ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್‌ಗಳೇ ಇವೆ. ನಿಯಮಗಳನ್ನು ಪಾಲನೆ ಮಾಡತಕ್ಕ ಅಧಿಕಾರ, ಯಾವ ಯಾವ ಸರ್ಕಾರಗಳು ಮಸೂದೆ ಮಾಡಿ, ಪಾಸ್ ಮಾಡಿಕೊಂಡಿರುತ್ತವೆ. ಅದಕ್ಕೆ ಅವಕಾಶ ಇದೆ. ಆದ್ದರಿಂದ, ನಾವು ಯೋಚನೆ ಮಾಡಿದ್ದೇವೆ. ಈ ವಿಚಾರದಲ್ಲಿ ಅವರೇನು ನಿರ್ಣಯ ಮೂವ್ ಮಾಡಿದ್ದಾರೆ, ಅದನ್ನು ನಾನು ಅಪೋಸ್ ಮಾಡುವುದಕ್ಕೆ ಮುಂಚೆ, ಅವರು ಕನ್‌ಕ್ಲೂಡ್ ಮಾಡಿದರೆ, ಆಮೇಲೆ ನಾನು ಹೇಳುತ್ತೇನೆ. ಇಲ್ಲಿ ಸ್ವಲ್ಪ ದೋಷಗಳು ಆಗಿರುತ್ತವೆ. ಲೇಯಿಂಗ್‌ನಲ್ಲಿ ಸ್ವಲ್ಪ ದೋಷಗಳು ಆಗಿರುತ್ತವೆ. ಅದನ್ನು ನಾನು ಇಲ್ಲ ಎಂದು ಹೇಳುವುದಿಲ್ಲ. ಬೇಕಾದಷ್ಟು ಕಾರಣಗಳಿಂದ ತಡ ಆಗಿರುತ್ತದೆ. ಈ ರೀತಿ ತಡ ಆಗದಹಾಗೆ ಮುಂದೆ ಜಾಗರೂಕತೆ ವಹಿಸಬೇಕಾದ್ದು ನಮ್ಮ ಕರ್ತವ್ಯ ಇದೆ, ಅದನ್ನು ನಾವು ಮಾಡುತ್ತೇವೆ. ಅದರ ಜೊತೆಯಲ್ಲಿ ಈ ಲೇಯಿಂಗ್‌ನಲ್ಲಿ ತಾವೇನು ಅಬ್ಜಕ್ಷನ್ ತಂದಿದ್ದೀರಿ, ಅದು ಸ್ವಲ್ಪ ಸೀಮಿತವಾದರೆ, ಉತ್ತರ ಹೇಳುವುದು ಸುಲಭ.

12.30 ಪಿ ಎಂ

ಶ್ರೀ ಕೆ. ಜಯಪ್ರಕಾಶ ಹೆಗ್ಡೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಲಾಟರಿ ಆಡಿರಿ, ಶ್ರೀಮಂತರಾಗಿರಿ ಎಂದು ಹೇಳಿದ್ದಾರೆ. ತಾವು ಹೇಳಿದ್ದನ್ನು ನಾನು ತಪ್ಪು ತಿಳಿದುಕೊಳ್ಳುವುದಿಲ್ಲ. ಯಾಕೆಂದರೆ ಇದಕ್ಕಿಂತ ಬೆಟರ್ ಬಿಸಿನೆಸ್ ಬೇರೆ ಯಾವುದೂ ಇಲ್ಲ ಎಂದು ನನಗನ್ನಿಸುತ್ತದೆ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಇದರ ಮಹತ್ವ ಎಷ್ಟಿದೆ ಅಂದರೆ, ಆ ದೃಷ್ಟಿಯಿಂದ ಈ ನೋಟಿಫಿಕೇಶನ್ ಎಷ್ಟು ಡಿಫೆಕ್ಟಿವ್ ಆಗಿದೆ, ಇದರ ಅಡಿಯಲ್ಲಿ ಇಡೀ

ಸಮಾಜ ಎಷ್ಟು ಕೆಟ್ಟಿದೆ. ಇದರಿಂದ ರಾಜ್ಯ ಸರಕಾರಕ್ಕೆ ಎಷ್ಟು ಕೋಟಿ ರೂಪಾಯಿಗಳು ನಷ್ಟವಾಗುತ್ತಾ ಇದೆ, ಇದರಿಂದ ಸಾಮಾಜಿಕವಾಗಿ ಜನರಲ್ಲಿ ಎಷ್ಟು ಪರಿಣಾಮ ಬೀರುತ್ತಾ ಇದೆ, ಅದನ್ನು ನಾನು ವಿವರಣೆ ಕೊಟ್ಟು ಅದಕ್ಕೆ ಜಸ್ಟಿಫೈ ಮಾಡಿದಾಗ ತಾನೇ ನಾನು ಇದನ್ನು ವಿಥ್‌ಡ್ರಾ ಮಾಡಿ ಎಂದು ಹೇಳಬೇಕಾಗುತ್ತದೆ. ಆದರೆ ಇಲ್ಲಿ ಸರಕಾರದಲ್ಲಿ ಮೆಜಾರಿಟಿ ಇದೆ. ನನ್ನ ಮೋಷನ್ನನ್ನು ರಿಜೆಕ್ಟ್ ಮಾಡಬಹುದು, ಒಪ್ಪಿಕೊಳ್ಳಬಹುದು, ಮೊಡಿಫೈ ಮಾಡಬಹುದು. ಅದು ನಿಮಗೆ ಬಿಟ್ಟಂಥ ವಿಚಾರ. ಆದರೆ ನಾನು ಒಬ್ಬ ಮುಖಂಡನಾಗಿ, ವಿರೋಧ ಪಕ್ಷದ ಸದಸ್ಯನಾಗಿ, ನನಗೂ ಜವಾಬ್ದಾರಿಯಿದೆ. ಇದು ಯಾವಾಗ ಬಂತು? ಈಗ ಇಲ್ಲಿ ಲೇ ಮಾಡಿದ್ದರಿಂದ ನಮಗೆ ಅವಕಾಶ ಸಿಕ್ಕಿತು. ಇದನ್ನು ಎರಡು ವರ್ಷಗಳಿಂದ ಲೇ ಮಾಡಿರಲಿಲ್ಲವಲ್ಲಾ? ಆಗ ನೀವು ಲೇ ಮಾಡಿದ್ದರೆ, ನಾವು ಆಗಲೇ ತೆಗೆದುಕೊಂಡು ಏನು ಲೋಪದೋಷವಿದೆ ಎಂದು ಪ್ರಸ್ತಾಪ ಮಾಡಬಹುದಾಗಿತ್ತು. ಇವೊತ್ತು ನನಗೆ ಅವಕಾಶ ಸಿಕ್ಕಿದೆ. ನನಗೆ ಹಕ್ಕು ಇದೆಯಾದ ಕಾರಣ ನಾನು ವಿಷಯವನ್ನು ಎತ್ತಿದ್ದೇನೆ.

ಅಧ್ಯಕ್ಷರು : ಅವರು ಕೆಲವು ಲೋಪದೋಷಗಳು ಇರಬಹುದು ಎಂದು ಒಪ್ಪಕೊಂಡಿದ್ದಾರಲ್ಲಾ? ಅವರು ಡಿಫೆಂಡ್ ಮಾಡಿಕೊಳ್ಳುತ್ತಾ ಇಲ್ಲ. ಲೋಪದೋಷಗಳು ಆಗಿರುವ ಬಗ್ಗೆ ಒಪ್ಪಿದ್ದಾರೆ.

ಶ್ರೀ ಬಿ. ಸೋಮಶೇಖರ್ : ಇದು ಬಹಳ ಮಹತ್ವವಾದಂಥ ವಿಚಾರ. ಇದು ದಿನವೆಲ್ಲಾ ಚರ್ಚೆ ಮಾಡತಕ್ಕಂಥ ವಿಚಾರ. ಇದನ್ನು ಮೊಟಕುಗೊಳಿಸಬಾರದು. ಇದಕ್ಕಿಂತ ಬೆಟರ್ ಬಿಸಿನೆಸ್ ಬೇರೆ ಯಾವುದೂ ಇಲ್ಲ.

ಅಧ್ಯಕ್ಷರು : ಯಾವುದೇ ವಿಷಯದಲ್ಲಿ ತಮಗೂ ಆರು ಗಂಟೆಗಳ ಕಾಲ ಮಾತನಾಡುವ ಶಕ್ತಿ ಇದೆ, ಅದನ್ನು ಆರೇ ನಿಮಿಷಗಳಲ್ಲಿ ಮುಗಿಸುವ ಶಕ್ತಿಯೂ ತಮಗಿದೆ. ತಮಗೆ ಆ ಎರಡೂ ಶಕ್ತಿಗಳು ಇರುವುದರಿಂದ ತಾವು ಬೇಗನೆ ಮುಗಿಸಬಹುದು.

ಶ್ರೀ ಬಿ. ಸೋಮಶೇಖರ್ : ಇದರಲ್ಲಿ ರೂಲ್ಸ್ ಪ್ರಕಾರ ಇವೊತ್ತು ಎಷ್ಟು ಅಮೌಂಟ್ ಡ್ರಾ ಆಗುತ್ತದೆ. ಎಷ್ಟು ಟಿಕೇಟ್‌ಗಳು ಖರ್ಚಾಗುತ್ತದೆ, ಅದನ್ನು ಒಂದೇ ದಿನದೊಳಗಾಗಿ ಸರಕಾರದ ಖಜಾನೆಗೆ ಕಟ್ಟಬೇಕೆಂದಿದೆ. ಆದರೆ ಒಂದು ತಿಂಗಳಾದರೂ ಕೂಡ ಆ ಹಣವು ಜೀ ಟಿ.ವಿ. ಕಂಪನಿಯಲ್ಲಿಯೇ ಇರುತ್ತದೆ. ಸರಕಾರದವರು ಅದರಲ್ಲಿ ಏನು ತೆಗೆದುಕೊಂಡಿದ್ದಾರೆ. ಅಲ್ಲಿ ಎಲ್ಲವೂ ಮಿಸ್ ಅಪ್ರೋಪ್ರಿಯೇಶನ್ ಆಗುತ್ತಿದೆ. ಹಾಗಾದರೆ ಮೊದಲು ಏನಿತ್ತು? ಪ್ರೈಜ್ ವಿನ್ನರ್ಸ್‌ಗೆ ಸರಕಾರದ ಲಾಟರಿ ಡಿಪಾರ್ಟಮೆಂಟ್‌ನವರು ಹಣವನ್ನು ಕೊಡುತ್ತಾ ಇದ್ದರು. ಅದನ್ನು ಮ್ಯಾನೇಜ್ ಮಾಡಿ ತಿದ್ದುಪಡಿ ತಂದು ಅವರೇ ಹಣವನ್ನು ಕೊಡತಕ್ಕಂಥಾದ್ದಕ್ಕೆ ಒಂದು ವ್ಯವಸ್ಥೆಯನ್ನು ಮಾಡಿದ್ದೀರಿ. ಆ ಅಲ್ಟಾ ಏಜನ್ಸಿಯವರೇ ಹಣವನ್ನು ವಿತರಣೆ ಮಾಡತಕ್ಕಂಥಾದ್ದು ಅವರೇನು ಮಾಡುತ್ತಾರೆ? ನೀನು ಮತ್ತೊಂದು ಟಿಕೇಟ್ ತೆಗೆದುಕೋ, ಆ ಹಣದಲ್ಲಿ 10 ಪರ್ ಸೆಂಟ್ ಹಣವನ್ನು ಹಿಡಿದುಕೊಳ್ಳುತ್ತೇವೆ, ಹೀಗೆಯೇ ಬಹಳಷ್ಟು ಒತ್ತಾಯ ತಂದು ಮತ್ತಷ್ಟು ಟಿಕೆಟ್‌ಗಳನ್ನು ಅವರು ತೆಗೆದುಕೊಳ್ಳುವಂತೆ ಪ್ರೇರೇಪಣೆ ಮಾಡುತ್ತಾರೆ. ಈ ವ್ಯವಸ್ಥೆಯನ್ನು ಅವರಿಗೇ ಕೊಟ್ಟಿದ್ದರಿಂದ ಈ ರೀತಿ ಆಗಿದೆ. ಅಂದರೆ ನಾವು ನಮ್ಮ ಅಧಿಕಾರವನ್ನು ಖಾಸಗಿ ಕಂಪನಿಯವರಿಗೆ ಹಂತಹಂತವಾಗಿ ಹಸ್ತಾಂತರ ಮಾಡಿಕೊಂಡು ಬಂದಿದ್ದೇವೆ ಎಂದು ನಾನು ಹೇಳುತ್ತಾ ಇದ್ದೇನೆ. ಹಾಗೇಯೇ ಇವೊತ್ತು ಲಕ್ಕೀ–3 ಎಂದು ಲಾಟರಿ ಡ್ರಾ ಏನಿದೆ, ಅದರಲ್ಲಿ ಒಂದು ದಿನಕ್ಕೆ ಸರಾಸರಿ ಒಂದು ಕೋಟಿ ರೂ. ಗೂ ಹೆಚ್ಚು ಹಣ

ಸಂಗ್ರಹಣೆಯಾಗುತ್ತಿದೆ ಎಂದು ನಮ್ಮ ಒಂದು ಮಾಹಿತಿ. ಆದರೆ ಅವರು ಎಷ್ಟು ಲೆಕ್ಕವನ್ನು ಕೊಡುತ್ತಾ ಇದ್ದಾರೆ ಎಂದು ಯಾರಿಗೂ ಗೊತ್ತಿಲ್ಲ. ಇವೊತ್ತು ಸರಕಾರದಲ್ಲಿ ಏನು ಯೂನಿಟ್‌ಗಳು ಇವೆಯಲ್ಲಾ ಅವು ಎಷ್ಟಿವೆ ಎಂದು ಜ್ಞಾಪಕವಿಲ್ಲ. ಔಟ್ ಲೆಟ್ಸ್ ಎಷ್ಟಿವೆ ಎಂಬದು ಗೊತ್ತಿಲ್ಲ. ಅಂದರೆ, ಎಲ್ಲೆಲ್ಲಿ ನೋಡಿದರೂ ಫ್ಲೇವಿನ್ ಲಾಟರಿ ಎಂದು ಕಾಣುತ್ತದೆ. ಮೊದಲು ನಾವು ನೋಡುತ್ತಾ ಇದ್ದಂತೆ ಜೂಜು ಅಂದರೆ ರೇಸ್‌ಕೋರ್ಸ್ ರೋಡ್‌ನಲ್ಲಿ ಕೆಲವು ಕಾರ್‌ಗಳು, ಆಟೋಗಳು ನಿಂತುಕೊಳ್ಳುತ್ತಾ ಇದ್ದುವು. ಅದು ವಾರಕ್ಕೆ ಒಂದು ಸಾರಿ ಇತ್ತೆಂದು ಕಾಣುತ್ತದೆ. ಇದರಲ್ಲಿ ಯಾರೋ ಕೆಲವು ಜನರು ಅಂದರೆ ಯಾರಿಗೆ ಈ ಚಟ ಇತ್ತು, ಯಾರು ಸ್ವಲ್ಪ ಶ್ರೀಮಂತರು ಇದ್ದರು, ಮತ್ತು ಸಮಯ ಕಳೆಯಲು ಜೂಜಾಡುವ ಚಟ ಇಟ್ಟುಕೊಂಡವರು ಇದ್ದರು. ಅಂಥವರು ಮಾತ್ರ ರೇಸ್ ಆಡಲು ಹೋಗುತ್ತಿದ್ದರು. ಇವೊತ್ತು ಏನಾಗಿದೆ? ಪ್ರತಿಯೊಂದು ದಾರಿ ದಾರಿಯ ಅಂಗಡಿಗಳೆದುರು ಆಟೋಗಳು ನಿಂತಿರುತ್ತವೆ, ಹುಡುಗರು ಮೋಟಾರ್ ಸೈಕಲ್‌ನ್ನು ನಿಲ್ಲಿಸಿರುತ್ತಾರೆ, ಹಣವನ್ನು ಎಲ್ಲಿಂದ ತರುತ್ತಾರೋ ಗೊತ್ತಿಲ್ಲ. ಒಟ್ಟಿನಲ್ಲಿ ಆಟ ಆಡಲು ಶುರು ಮಾಡಿದ್ದಾರೆ. ಅಲ್ಲಿ ಹಣವನ್ನು ಕಳೆದು ಕಳೆದು, ಕೊನೆಗೆ ಕುಡಿದು ಮನೆಗೆ ಹೋಗಿ ಹುಚ್ಚನಾಗಿ ಸಾಯುತ್ತಾ ಇರತಕ್ಕಂಥಾದ್ದನ್ನು ಕೇಳುತ್ತಿದ್ದೇವೆ. ಬೆಂಗಳೂರು ಒಂದರಲ್ಲಿಯೇ ಬೇಕಾದಷ್ಟು.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಉಳಿದವರು ಯಾರೇ ಆಡಲಿ... ಆದರೆ ಇವೊತ್ತು ರಾಜ್ಯದಲ್ಲಿ ಹೆಣ್ಣುಮಕ್ಕಳು ಇಂಥ ಕೆಲಸವನ್ನು ಮಾಡುತ್ತಾ ಇರಲಿಲ್ಲ. ಇವೊತ್ತು ಹೆಣ್ಣುಮಕ್ಕಳು ಕೂಡ ಆಡುತ್ತಿದ್ದಾರೆ. ಹೆಣ್ಣುಮಕ್ಕಳು ಆಡುತ್ತಿರುವುದು ಒಂದು ದುರಂತ...

ಶ್ರೀ ಕೆ. ಶ್ರೀನಿವಾಸಗೌಡ (ಕುಡುವನ ಹಳ್ಳಿ) : ಗಂಡು ಮಕ್ಕಳು ಆಡಬಹುದು, ಹೆಣ್ಣು ಮಕ್ಕಳು ಆಡಬಾರದೇ? ಇದು ನ್ಯಾಯವಲ್ಲ... ಆಡುವ ಹಾಗಿದ್ದರೆ ಎಲ್ಲರೂ ಆಡಬಹುದು. ಬೇಡವೆಂದರೆ ಯಾರಿಗೂ ಬೇಡ.

ಶ್ರೀ ಎಸ್.ಎಸ್. ಪಾಟೀಲ್ : ಇವೊತ್ತು ಏನಾದರೂ ಧರ್ಮನೀತಿ ಉಳಿದಿದ್ದರೆ ಅದು ಹೆಣ್ಣುಮಕ್ಕಳಲ್ಲಿ ಉಳಿದಿದೆ. ಅವರನ್ನೂ ನೀವು ಹಾಳು ಮಾಡಿದ್ದೀರಿ ಎಂದು ಹೇಳುತ್ತಿದ್ದೇನೆ. ಹೆಣ್ಣುಮಕ್ಕಳು ಆಡಬಾರದು, ಆಡುವುದೂ ಇಲ್ಲ...

ಶ್ರೀ ಬಿ. ಸೋಮಶೇಖರ್ : ಇಲ್ಲಿ ಯಾರು ಆಡ ಬಹುದು, ಯಾರು ಆಡಬಾರದು ಎನ್ನುವ ವಿಚಾರವಲ್ಲ. ಇದು ಓಪನ್ ಮಾರ್ಕೆಟ್ ಆಗುತ್ತದೆ. ಒಟ್ಟಿನಲ್ಲಿ ಈ ಆಟದ ಹುಚ್ಚು ಏನು ಬರುತ್ತಾ ಇದೆ, ಇದು ರೇಸ್ ಗಿಂತ ಹೆಚ್ಚಿನ ಹುಚ್ಚಾಗಿ ಬರುತ್ತಾ ಇದೆ. ಅದರಲ್ಲಿ ಎಷ್ಟು ಮಂದಿ ಮಧ್ಯಮವರ್ಗದವರು, ಬಡವರು, ಆಶೆಯಿಂದ ಇವರ ಪ್ರಚೋದನೆಗೆ ಒಳಗಾಗಿ, ಟಿಕೆಟ್ ಗಳನ್ನು ತೆಗೆದುಕೊಳ್ಳುತ್ತಾ ಇರುವುದು, ಲಾಟರಿ ಬಾರದೆ, ಸಾಲ ಮಾಡುವುದು, ಹುಚ್ಚರಾಗುತ್ತಿರುವುದು ಹೆಚ್ಚಾಗುತ್ತಿದೆ. ಇದರಿಂದಾಗಿ ಒಂದು ಕೆಟ್ಟ ಪರಿಣಾಮ ನಮ್ಮ ರಾಜ್ಯದ ಮೇಲೆ ಬಿದ್ದಿದೆ. ಇವೊತ್ತು ಹೆಣ್ಣುಮಕ್ಕಳೂ ಕೂಡ ಆಡಲು ಪ್ರಾರಂಭ ಮಾಡಿದ್ದಾರೆ. ಅದರಿಂದಾಗಿ ಎಷ್ಟೋ ಜನರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಹುಚ್ಚರಾಗಿದ್ದಾರೆ, ಕುಡಿಯುವುದನ್ನು ಕಲಿತುಕೊಂಡಿದ್ದಾರೆ. ಅವರ ಮನೆಗಳೆಲ್ಲವೂ ಹಾಳಾಗುತ್ತಾ ಇವೆ. ಇಷ್ಟೆಲ್ಲಾ ಆದರೂ ಕೂಡ ನೀವು ಅಲ್ಲಿಂದ ಎಷ್ಟು ಹಣ ಸಂಗ್ರಹಣೆಯಾಗುತ್ತಿದೆ ಎಂದು ಲೆಕ್ಕವನ್ನು ಇಟ್ಟಿದ್ದೀರಾ? ಎಷ್ಟು ಹಣ ಅವರಿಗೆ ಹೋಗುತ್ತಾ ಇದೆ, ಎಷ್ಟು ಹಣ ನಿಮಗೆ

ಬರುತ್ತಾ ಇದೆ ಎಂದು ಲೆಕ್ಕವಿಟ್ಟಿದ್ದೀರಾ? ವಿನ್ನರ್ಸ್‌ಗೆ ಎಷ್ಟು ಹಣ ಹೋಗುತ್ತಿದೆ ಎಂಬ ಲೆಕ್ಕವಿಟ್ಟಿದ್ದೀರಾ? ನೀವು ಒಂದು ವರ್ಷಕ್ಕೆ ನೂರು ಕೋಟಿ ರೂಪಾಯಿಗಳು ಉಳಿತಾಯವಾಗಬಹುದೆಂದು ಹೇಳಿದ್ದೀರಿ. ನಮ್ಮ ಅಂದಾಜಿನ ಪ್ರಕಾರ ನೂರಲ್ಲ, ಸಾವಿರಾರು ಕೋಟಿ ರೂ.ಗಳು ಒಂದು ವರ್ಷಕ್ಕೆ ಬರುತ್ತದೆ. ನೀವು ಈಗ ಇಷ್ಟೇ ಟಿಕೆಟ್ ಮಾರಾಟ ಮಾಡಬೇಕೆಂದು ಲಿಮಿಟ್ ಮಾಡಿದ್ದೀರಿ. ಆ ಲಿಮಿಟ್ ಅನ್ನು ಯಾರಾದರೂ ಲೆಕ್ಕವಿಟ್ಟುಕೊಂಡಿದ್ದೀರಾ? ನಿಮ್ಮಲ್ಲಿ ಎಷ್ಟು ಟಿಕೆಟ್ ಮಾರಿದ್ದಾರೆಂಬುದಕ್ಕೆ ಲೆಕ್ಕವಿಲ್ಲ. ನೀವು ನೂರು ಟಿಕೆಟ್ ಎಂದು ಲೆಕ್ಕವಿಟ್ಟುಕೊಂಡರೆ ಅವರು ಒಂದು ಲಕ್ಷ ಟಿಕೆಟ್ ಮಾರುತ್ತಾರೆ. ಹಾಗಾದರೆ ಹೆಚ್ಚು ಟಿಕೆಟ್‌ಗಳ ಮಾರಾಟದ ಹಣವು ಎಲ್ಲಿ ಹೋಗುತ್ತದೆ? ನಿಮ್ಮ ಸರಕಾರಕ್ಕೆ ನೂರು ಟಿಕೆಟ್‌ಗಳ ಹಣ ಮಾತ್ರ ಬರಬಹುದು. ಹೆಚ್ಚಿನ ಟಿಕೆಟ್‌ಗಳ ಮಾರಾಟದ ಹಣವು ಆ ಕಂಪನಿಯವರಿಗೆ ಹೋಗುತ್ತದೆ. ಆ ಕುರಿತು ನೀವು ಯಾವ ಲೆಕ್ಕವಿಟ್ಟಿಲ್ಲ. ಹಾಗಾಗಿ ಈ ನೋಟಿಫಿಕೇಶನ್ ಆ ವಿಷಯ ಸ್ಪಷ್ಟವಾಗಿಲ್ಲ. ಮತ್ತೆ ಈ ಮೂಲಕ ಎಷ್ಟು ಹಣ ಸಂಗ್ರಹಣೆಯಾಗಿದೆ, ಎನ್ನುವ ವಿವರಗಳು ಇದುವರೆಗೂ ಗೊತ್ತಿಲ್ಲ. ಹಾಗೆಯೇ ಒಟ್ಟು ಇರುವ ಔಟ್‌ಲೆಟ್ಸ್ ಎಷ್ಟು ಇವೆ ಎಂಬುದು ಯಾರಿಗೂ ಗಮನಕ್ಕೆ ಬಂದಿಲ್ಲ. ಬೆಂಗಳೂರು ಒಂದರಲ್ಲಿಯೇ ನಾಲ್ಕೈದು ಸಾವಿರಗಳಷ್ಟು ಇರಬಹುದು ಎಂದು ಕಾಣುತ್ತದೆ. ಆದರೆ ನಮ್ಮ ರಾಜ್ಯಾದ್ಯಂತ ಮತ್ತು ದೇಶದಾದ್ಯಂತ ಎಷ್ಟಿರಬಹುದು? ಆದರೆ ಅವರು ನಿಮಗೆ ಲೆಕ್ಕ ಕೊಟ್ಟಿರತಕ್ಕಂಥಾದ್ದು, ಕೇವಲ ಎರಡು ಮೂರು ಸಾವಿರಗಳಷ್ಟು ಔಟ್‌ಲೆಟ್ಸ್ ಇರಬಹುದೆಂದು ಲೆಕ್ಕ ಕೊಟ್ಟಿರಬಹುದು. ಒಟ್ಟು ಇರುವ ಔಟ್‌ಲೆಟ್ಸ್ ಮತ್ತು ಅವುಗಳಲ್ಲಿ ಮಾರಾಟವಾಗುತ್ತಿರುವ ಟಿಕೆಟ್‌ಗಳ ಬಗ್ಗೆ ಯಾರೂ ಮಾಹಿತಿ ಇಟ್ಟಿಲ್ಲ. ಯಾರಾದರೂ ಒಬ್ಬ ಏಜೆಂಟ್ ಒಂದು ಔಟ್‌ಲೆಟ್ ಇಟ್ಟರೆ ಸುಮಾರು ಮೂರು ಲಕ್ಷ ರೂ.ಗಳನ್ನು ಡೆಪಾಸಿಟ್ ಎಂದು ತೆಗೆದುಕೊಳ್ಳುತ್ತಾರೆ. ಅದು ಸಾಫ್ಟ್‌ವೇರ್, ಹಾರ್ಡ್‌ವೇರ್, ಬಾಡಿಗೆ, ಮುಂತಾದವುಗಳಿಗೆ ಎಂದು ಹೇಳುತ್ತಾರೆ. ಆ ಹಣವನ್ನು ಇವರು ಎಷ್ಟು ಜನ ಏಜೆಂಟ್ಸ್ ಮೂಲಕ ಪಡೆದಿದ್ದಾರೆಂಬ ಲೆಕ್ಕವಿಲ್ಲ. ಅದು 4,5,6, ಸಾವಿರಗಳಷ್ಟಿರಬಹುದು. ಅದಕ್ಕೆ ಮೂರು ಲಕ್ಷ ರೂ.ಗಳಂತೆ ಎಷ್ಟು ಕೋಟಿ ರೂ.ಗಳಾದವು? ಅದರ ನಿಯಂತ್ರಣವನ್ನು ಯಾರು ಇಟ್ಟುಕೊಂಡಿದ್ದಾರೆ? ಅದರ ಬಗ್ಗೆ ಲೆಕ್ಕವಿಲ್ಲ. ಹಾಗೆಯೇ ಕೆಲವು ವಿನ್ನರ್‌ಗಳು ತಮ್ಮ ಹಣವನ್ನು ತೆಗೆದುಕೊಂಡಿರುವುದಿಲ್ಲ. ಅಂಥ ಒಂದು ಅನ್‌ಕ್ಲೈಮ್ಡ್ ಅಮೌಂಟ್‌ಗಳನ್ನು ಸರಕಾರಕ್ಕೂ ಕೊಡುತ್ತಾ ಇಲ್ಲ. ಅದು ಎಷ್ಟು ಮೊತ್ತವಿದೆ ಎಂಬುದೂ ಕೂಡ ಗೊತ್ತಿಲ್ಲ. ಅದೆಲ್ಲವನ್ನೂ ಕೂಡ ಆ ಕಂಪನಿಯವರೇ ಇಟ್ಟುಕೊಳ್ಳುತ್ತಾರೆ. ಇವರು ಈ ಲಾಟರಿಯನ್ನು ಪ್ರಾರಂಭಿಸಿದ ಮೇಲೆ ನಮ್ಮ ಎಂಎಸ್‌ಐಎಲ್ ನವರು ಮಾರಾಟ ಮಾಡುತ್ತಿದ್ದಂಥ ಲಾಟರಿ ವ್ಯವಸ್ಥೆಗೆ ಭಾರಿ ಹೊಡೆತವುಂಟಾಗಿದೆ. ಅದೇ ರೀತಿಯಲ್ಲಿ ಈ ಸರಕಾರದ ನೀತಿ ನೋಡಿ ಅಲ್ಲಿ ತಮಿಳುನಾಡಿನಿಂದ ಓಡಿಸಿದಂಥ ಕೆಲವು ಖಾಸಗಿ ಲಾಟರಿ ಸಂಸ್ಥೆಗಳು ಇಲ್ಲಿ ಬಂದು ದಂಧೆ ನಡೆಸುತ್ತಿದ್ದಾರೆ. ಈಗಾಗಲೇ ಅದರ ಬಗ್ಗೆ ವಿಧಾನಪರಿಷತ್ತಿನಲ್ಲೂ ಚರ್ಚೆಯಾಗಿದೆ, ಇಲ್ಲಿಯೂ ಚರ್ಚೆಯಾಗಿದೆ. ಆದ್ದರಿಂದ ಯಾವ ಸರಕಾರ ಕೂಡ ಇದರ ಬಗ್ಗೆ ಯಾವ ಒಂದು ನಿಯಂತ್ರಣವನ್ನೂ ಮಾಡತಕ್ಕಂಥ ಸಾಧ್ಯತೆಯಿಲ್ಲ. ಈಗಾಗಲೇ ಅಲ್ಲಿ ಒಬ್ಬರು ಡೈರೆಕ್ಟರ್ ಇದ್ದರು. ಅವರ ಹೆಸರು ಅಗಪಾನೆ ಎಂದು. ಅವರು ಇದ್ದಾಗ ಕೆಲವು ತಿದ್ದುಪಡಿ ನಿಯಮಗಳನ್ನು ತಂದಿದ್ದರು. ಅವರು ಸ್ವಲ್ಪ ಬಿಗಿನಿಲುವು ತಂದು ಪ್ರತಿಯೊಂದಕ್ಕೂ ಎಷ್ಟು ಟಿಕೆಟ್ ಮಾರಬೇಕೆಂದು ಮಾಡಿ ಅದರ ಲೆಕ್ಕವು ಸರಕಾರದಲ್ಲಿರಬೇಕು, ಎಷ್ಟು ಹಣವು ಸಂಗ್ರಹಣೆಯಾಗುತ್ತದೆ

ಅದರಲ್ಲಿ 45 ಪರ್‌ಸೆಂಟ್ ಹಣವು ವಿನ್ನರ್ಸ್‌ಗೆ ಹೋಗಿ, ಉಳಿದುದು ಎಷ್ಟು ಮತ್ತು ಎಲ್ಲಿರಬೇಕು ಹಾಗೂ ಎಷ್ಟು ಟಿಕೆಟ್ ಮಾರಾಟವಾಗಿದೆ, ಎಷ್ಟು ಏಜೆಂಟ್‌ರನ್ನು ನೇಮಿಸಿಕೊಂಡಿದ್ದಾರೆ, ಎಂಬಿತ್ಯಾದಿ ಎಲ್ಲ ಲೆಕ್ಕವನ್ನು ಇಡಬೇಕು ಎಂದು ಮಾಡಿದ್ದರು. ಅನ್‌ಕ್ಲೈಮ್ಡ್ ಅಮೌಂಟ್ ಎಲ್ಲಿ ಹೋಗುತ್ತದೆ, ಎಂಬ ವಿವರಗಳನ್ನೆಲ್ಲಾ ಕೊಡಬೇಕೆಂದು ಮಾಡಿದ್ದರು. ಅವರನ್ನು ವರ್ಗಾವಣೆ ಮಾಡಿದಿರಿ. ಅದಾದಮೇಲೆ ರಂಜನೀಶ್ ಕುಮಾರ್ ಎನ್ನುವ ಬಹಳ ಬಿಗಿಯಾದಂಥ ಅಧಿಕಾರಿಗಳು ಬಂದಿದ್ದರು. ಅವರನ್ನು ವರ್ಗ ಮಾಡಿದ್ದೀರಿ. ಇವೊತ್ತು ಡಿಸ್ಟಿಲರಿಗಳಿಗೆ ಯಾರು ಅಬಕಾರಿ ಅಧಿಕಾರಿಗಳು ಹೋಗುತ್ತಾರೆ ಎಂದರೆ, they will choose their inspectors. The Distillery people wil choose their insepctors. Like that the Zee T.V...

ಅಧ್ಯಕ್ಷರು : ಸೋಮಶೇಖರ್‌ರವರೆ, ನೀವು ಲಾಟರಿಯಿಂದ ಈಗ ಡಿಸ್ಟಿಲರಿಗೆ ಹೊರಟು ಹೋಗುತ್ತಿದ್ದೀರಿ.

Sri B. Somashekar : They are choosing their Officers. ನಾನು ಎಕ್ಸಾಂಪಲ್ ಆಗಿ ಹೇಳುತ್ತಿದ್ದೇನೆ.

ಅಧ್ಯಕ್ಷರು : ಎಕ್ಸಾಂಪಲ್ ಬೇಕಾಗಿಲ್ಲ. That subject is not connected with lottery. ಸಬ್ ಜೆಕ್ಟ್ ಮೇಲೆ ಮಾತನಾಡಿ.

Sri B. Somashekar : Zee TV Company is choosing their own officers. If strict officers are there, they will not allow them to continue even for a day. ನಾನು ವಾಸ್ತವಾಂಶಗಳನ್ನು ಹೇಳುತ್ತಿದ್ದೇನೆ. They are working like their agents here. I am worried about the pilferage. ಇನ್ನೊಂದು ಕಡೆ ಸಮಾಜ ನಾಶವಾಗುತ್ತಾ ಇದ್ದರೆ, ಮತ್ತೊಂದು ಕಡೆ ಸರಕಾರಕ್ಕೆ ನಷ್ಟವಾಗುತ್ತಾ ಇದೆ ಎಂಬುದು ಸರಕಾರದ ಗಮನದಲ್ಲಿದೆಯೇ? ಈ ಒಂದು ನಿಯಮಾವಳಿಗಳನ್ನು ಏನು ರಚನೆ ಮಾಡಿದ್ದೀರಿ ಅವುಗಳೆಲ್ಲವೂ ದೋಷಪೂರಿತವಾದುವುಗಳು. ಇದರಿಂದ ಸಮಾಜ ಹಾಳಾಗುತ್ತಾ ಇದೆ, ಯಾವುದೇ ರೀತಿಯ ನಿಖರ ಮತ್ತು ನಿರ್ದಿಷ್ಟವಾದ ಆಡಳಿತ ಮಾಡುತ್ತಾ ಇಲ್ಲ. ನಮ್ಮ ಅಧಿಕಾರಿಗಳೂ ಸಹ ಕಂಪನಿಯ ಏಜಂಟರುಗಳಾಗಿ, ಸರಕಾರಕ್ಕೆ ಬರತಕ್ಕಂಥ ಸಾವಿರಾರು ಕೋಟಿರೂ.ಗಳ ಹಣವನ್ನು ತಪ್ಪಿಹೋಗುವಂತೆ ಮಾಡಿದ್ದಾರೆ. ಅದನ್ನು ಇವೊತ್ತು ಕೇವಲ ನೂರು ಕೋಟಿ ರೂ.ಗಳು ಎಂದು ತೋರಿಸಿ. ಆ ನೂರು ಕೋಟಿ ರೂ.ಗಳಲ್ಲಿ ಕೇವಲ 60 ಕೋಟಿ ರೂ.ಗಳನ್ನು ಮಾತ್ರ ಕಟ್ಟಿರತಕ್ಕಂಥಾದ್ದು, ಇನ್ನೂ 40 ಕೋಟಿ ರೂ.ಗಳನ್ನು ಕಟ್ಟಿಲ್ಲವೆನ್ನುವಂಥಾದ್ದು ನನ್ನ ಹತ್ತಿರ ಇರುವ ಮಾಹಿತಿ ಪ್ರಕಾರ. ಆದ್ದರಿಂದ ತಾವು ಈ ನೋಟಿಫಿಕೇಶನ್‌ನ್ನು ವಿಥ್‌ಡ್ರಾ ಮಾಡಬೇಕು, ಇದರ ಮೂಲಕ ದೊಡ್ಡ ಸೇವೆಯನ್ನು ನಮ್ಮ ಸಮಾಜಕ್ಕೆ ಮಾಡಿದ ಹಾಗೆ ಆಗುತ್ತದೆ ಎಂದು ಹೇಳಬಯಸುತ್ತೇನೆ. ಸೋರಿಕೆ ಬೇರೆ ವ್ಯವಹಾರದಲ್ಲಿ ಏನಿದೆ ಅದನ್ನು ನೀವು ತಡೆಗಟ್ಟಿ. ಆದರೆ ಲಾಟರಿ ಮಾಡಿ ಇವತ್ತು ಜೂಜನ್ನು ಎನ್‌ಕರೇಜ್ ಮಾಡಿ ಸಮಾಜ ಹಾಳು ಮಾಡತಕ್ಕಂತಹದ್ದು ಒಂದು ಕಡೆಯಾದರೆ ಇನ್ನೊಂದು ಕಡೆ ಸಾವಿರಾರು ಕೋಟಿ ರೂಪಾಯಿ ಸರ್ಕಾರಕ್ಕೆ ನಷ್ಟವಾಗುತ್ತಿದೆ. ಆದ್ದರಿಂದ ಈ notification ಅನ್ನು withdraw ಮಾಡಬೇಕೆಂದು ನಾನು ಆಗ್ರಹಪೂರ್ವಕವಾಗಿ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಮಾನ್ಯ ಅಧ್ಯಕ್ಷರೇ, ಇಷ್ಟು ಹೊತ್ತು ತಾಳ್ಮೆಯಿಂದ ತಾವು ಕೇಳಿದ್ದಕ್ಕೆ ತಮಗೂ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ) : ಮಾನ್ಯ ಅಧ್ಯಕ್ಷರೇ, ಇದು ತಿದ್ದುಪಡಿ.

ಅಧ್ಯಕ್ಷರು : ಕ್ಷಮಿಸಿ, ಸೋಮಶೇಖರ್ ಒಬ್ಬರೇ ಕಳುಹಿಸಿರುವುದು ಇದನ್ನು ತಿದ್ದುಪಡಿ ಅಂದರೆ ಅವರು ಈ notification ಅನ್ನು lay ಮಾಡಬಾರದು ಎಂದು ಬರೆದಿರುವುದು ಅಷ್ಟೇ. ತಾವು signature ಮಾಡಿಲ್ಲ ತಿದ್ದುಪಡಿಯನ್ನೂ ಕಳುಹಿಸಿಲ್ಲ. Signature ಮಾಡಿದ್ದರೆ it is a different issue.

ಶ್ರೀ ಎಸ್. ಸುರೇಶ್ ಕುಮಾರ್ : ನಾನು ಮೂರು ನಿಮಿಷಕ್ಕಿಂತ ಜಾಸ್ತಿ ತೆಗೆದುಕೊಳ್ಳುವುದಿಲ್ಲ.

ಅಧ್ಯಕ್ಷರು : ತಮಗೆ ಕೊಟ್ಟರೆ ಬೇರೆಯವರಿಗೂ ಕೊಡಬೇಕಲ್ಲಾ ನಮ್ಮ ಮುಂದೆ ಸಮಯ ಇಲ್ಲ. ಅವರು ಈ rules lay ಮಾಡಬಾರದು ಎಂದು ತಿದ್ದುಪಡಿ ಕಳುಹಿಸಿದ್ದಾರೆ. ಅದಕ್ಕೆ ನನ್ನ ಅಭ್ಯಂತರ ಇಲ್ಲ. ಆದರೆ ಈಗ ತಮಗೆ ಕೊಟ್ಟರೆ ಇನ್ನೊಬ್ಬರಿಗೆ ಕೊಡಬೇಕು, ಇನ್ನೊಬ್ಬರಿಗೆ ಕೊಟ್ಟರೆ ಮತ್ತೊಬ್ಬರಿಗೆ ಕೊಡಬೇಕು. ಹೇಗೆ? Come on tell me.

ಶ್ರೀ ಎಸ್. ಸುರೇಶ್ ಕುಮಾರ್ : ಸಾರ್, ಇದು ತಿದ್ದುಪಡಿ. ಇದರ ಮೇಲೂ ಮಾತನಾಡಬಾರದು ಅಂದರೆ ಹೇಗೆ?

Mr. Speaker : Atleast ನೀವು co-signature ಮಾಡಿದ್ದರೆ I would have allowed. ಅದೂ ಮಾಡಿಲ್ಲವಲ್ಲಾ.

Sri S. Suresh Kumar (Rajajinagar) : In fact ಮೊದಲೇ ನಾನು ಸೋಮಶೇಖರ್ ರವರಿಗೆ, I should compliment him. For the first time in the annals of the Karnataka Legislature ಓರ್ವ ಸದಸ್ಯ ಈ ರೀತಿ Notification ಗೆ ತಿದ್ದುಪಡಿ ತಂದಿರುವುದು, Infact ಇಡೀ ಸದನ ಅವರಿಗೆ compliment ಮಾಡಬೇಕು. ಅಭಿನಂದನೆ ಸಲ್ಲಿಸಬೇಕು. ಈ ರೀತಿ ಬಂದಿರುವಾಗ ಮೂರು ನಿಮಿಷ ನಮಗೆ ನಮ್ಮ ಅಭಿಪ್ರಾಯ ಹೇಳುವುದಕ್ಕೆ ಬಿಡುವುದಿಲ್ಲ ಅಂದರೆ ಹೇಗೆ?

ಅಧ್ಯಕ್ಷರು : ಆಯಿತು, ತಮಗೊಂದು ನಿಮಿಷ, ಹೆಗಡೆಯವರಿಗೆ ಎರಡು ನಿಮಿಷ, that's all.

Sri D.B. Chandre Gowda : A member who has moved a resolution alone will speak and try to convince the House as to what he wants to move ಈಗ ಅದನ್ನು ಅವರು ಮಾಡಿದ್ದಾರೆ. ಸರ್ಕಾರದ ನಿಲುವೇನು ಎಂದು ಕೇಳಬೇಕು, ಆಮೇಲೆ ಅಗತ್ಯಬಿದ್ದರೆ ಅದನ್ನು ಮತಕ್ಕೆ ಹಾಕಬೇಕು, ಅದು ತಮಗಿರುವ ಅಧಿಕಾರ. ಇದರ ಮಧ್ಯೆ ಚರ್ಚೆ ಮಾಡಬೇಕು ಅಂದರೆ..

ಅಧ್ಯಕ್ಷರು : ಒಂದು ಕೆಲಸ ಮಾಡಿ, ತಾವಿಬ್ಬರೂ ಇದೇ ಸಬ್ಜೆಕ್ಟನ್ನು ಇನ್ನೊಂದು ರೂಪದಲ್ಲಿ ಕೊಡಿ, ಆಮೇಲೆ ನೋಡೋಣ. I will see.

Sri D.B. Chandre Gowda : Ultimately, the matter has to go to the Sub-ordinate Legislation Committee.

ಅಧ್ಯಕ್ಷರು : ಅಷ್ಟೇ, ಇನ್ನೊಂದು ರೂಪದಲ್ಲಿ ಕೊಡಿ ಸುರೇಶ ಹೆಗಡೆಯವರೇ ಈಗ ಬೇಡಿ.

ಶ್ರೀ ಎಸ್. ಸುರೇಶ್ ಕುಮಾರ್ : ಸದನ ಇನ್ನೂ ನಾಲ್ಕು ದಿವಸ ನಡೆಯುತ್ತದೆ.

ಅಧ್ಯಕ್ಷರು : ಈಗ ನಮ್ಮ ಮುಂದೆ ಸಮಯ ಇಲ್ಲ. ಇನ್ನೂ ಸರ್ಕಾರಿ ಕೆಲಸ ಬೇಕಾದಷ್ಟು ಇದೆ. ಬೇರೆ ರೂಪದಲ್ಲಿ ನೋಡೋಣ. before friday I will allow.

– ಗೊಂದಲ –

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೇ, ಒಂದು ನಿಮಿಷ ಕೇಳಿಬಿಡಿ. ನೀವು ನನಗೆ ಅನುಮತಿ ಕೊಟ್ಟಿದ್ದಿರಿ. ಆಮೇಲೆ ಸನ್ಮಾನ್ಯ ಚಂದ್ರೇಗೌಡರು, ಈ ಸದನದ ಸ್ನೇಹಿತರು ಅವರು ಎದ್ದುನಿಂತು ಇದು ನಿಮ್ಮ ಡಿಸ್ಕ್ರಿಶನ್ ಅಂದರು. ಅದನ್ನು ಹೇಳುವ ಮುಂಚೇನೇ ನೀವು ಅಧಿಕಾರ ಚಲಾಯಿಸಿ..

ಅಧ್ಯಕ್ಷರು : ಆಯಿತು, ಒಂದು ನಿಮಿಷದಲ್ಲಿ ತಾವು ಮುಗಿಸುವ ಹಾಗಿದ್ದರೆ I have no objection.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೇ, ಮತ್ತೊಮ್ಮೆ ಸೋಮಶೇಖರ್ ರವರಿಗೆ ನಾನು ಅಭಿನಂದನೆ ಸಲ್ಲಿಸುತ್ತಾ ಏನು ಈ ಅಧಿಸೂಚನೆ ಬಂದಿದೆ ಇದು ಕಾಲದ ದೃಷ್ಟಿಯಿಂದಲೂ ಕೂಡ ಸರಿಯಿಲ್ಲದ ಅಧಿಸೂಚನೆ. 2001 ಮೇ 16ನೇ ತಾರೀಖು ಇದು ಪ್ರಿಂಟಾಗಿರುವುದು, ಆದರೆ ಸದನದಲ್ಲಿಡುತ್ತಿರುವುದು ಕೇವಲ 15 ದಿವಸಕ್ಕೆ ಮುಂಚೆ, ಯಾವುದೇ ದೃಷ್ಟಿಯಿಂದ ಒಂದು ಸರ್ಕಾರ ಮಾಡುವಂತಹ ತಪ್ಪಲ್ಲ. ಅಲ್ಪಸ್ವಲ್ಪ ತಪ್ಪಾಗುತ್ತದೆ ಎಂದು ಚಂದ್ರೇಗೌಡರು ಸಮರ್ಥಿಸಿಕೊಳ್ಳಬಹುದು. ಆದರೆ ಇದು ಸರ್ಕಾರ ಮಾಡುವಂತಹ ತಪ್ಪಲ್ಲ ಎರಡನೆಯದು ಈ ಒಂದು ಅಧಿಸೂಚನೆಯಲ್ಲಿ ಏನೇನು contents ಇದೆ ಅದರಲ್ಲಿ ಶೇಕಡ 90ರಷ್ಟು ಉಲ್ಲಂಘನೆ ಕಳೆದ ಎರಡು ವರ್ಷಗಳಿಂದ ಆಗುತ್ತಾ ಇದೆ. ಒಂದೇ ಒಂದು ತಮ್ಮ ಗಮನಕ್ಕೆ ನಾನು ತರುತ್ತೇನೆ. ಇಲ್ಲಿ ಗಣಕೀಕೃತ network lottery ನಡೆಸುವುದು ಎಂದು ಇದೆ, ಅದಕ್ಕೊಂದು committee ಮಾಡಿದ್ದಾರೆ Principal secretary for Finance, he is the chairman for that committee. ನಿರ್ದೇಶಕರು; ಸಣ್ಣ ಉಳಿತಾಯ, ಲಾಟರಿ ಇಲಾಖೆ, ಕರ್ನಾಟಕ ಸರ್ಕಾರ–ಇವರು ಉಪಾಧ್ಯಕ್ಷರು, ಇನ್ನು ಕೆಲವರು ಸದಸ್ಯರಿದ್ದಾರೆ. ಬಹಳ ಮುಖ್ಯ ಅಂದರೆ ಈ ಅಧ್ಯಕ್ಷರ ಹಾಜರಿಯಲ್ಲಿ ಲಾಟರಿ ಡ್ರಾ ಮಾಡಬೇಕು. ಅಂದರೆ ಪ್ರತಿ ದಿವಸ ಡ್ರಾ ಮಾಡುವಾಗ Principal Secretary ಹೋಗಬೇಕು. ಅವರು ಹೋಗಲು ಆಗದಿದ್ದರೆ ನಿರ್ದೇಶಕರು ಹೋಗಬೇಕು. ನನಗೆ ಗೊತ್ತಿರುವ ಪ್ರಕಾರ ಇವರ್ಯಾರೂ ಇರುವುದಿಲ್ಲ. ಆದರೂ ಲಾಟರಿ ನಡೆಯುತ್ತಾ ಇದೆ. ಇದು, ಬಹಳ ದೊಡ್ಡ ದುರಂತ. ಎರಡನೆಯದು ಆಗಲೇ ಹೇಳಿದಂತೆ ಪ್ರತಿ ದಿವಸ ಸಂಗ್ರಹವಾದ ಹಣವನ್ನು ಮಾರನೇ ದಿವಸ ಟ್ರೆಜರಿಗೆ ಕಟ್ಟಬೇಕು. ಕಟ್ಟುತ್ತಾ ಇಲ್ಲ, 21% of the money, prize amount ಎಂದು ನಿಗದಿ ಮಾಡಬೇಕು. ಅದನ್ನು ಮಾಡುತ್ತಾ ಇಲ್ಲ. ಬಹಳ ದುರಂತ ಅಂದರೆ ಈ ಸರ್ಕಾರ ಯಾವ

ರೀತಿ ಲಕ್ಷಾಂತರ ಮನೆಗಳನ್ನು ಹಾಳು ಮಾಡುವುದರಲ್ಲಿ ಶಾಮೀಲಾಗಿದೆ ಅಂದರೆ ಹೋರ್ಡಿಂಗ್ ಬೋರ್ಡ್ಸ್ ಬೆಂಗಳೂರಿನಲ್ಲಿ. ಒಬ್ಬ ಚಿಕ್ಕ ಬಹಳ ಮುದ್ದಾದ ಶಾಲಾ ವಿದ್ಯಾರ್ಥಿ ಹೇಳುತ್ತಾರೆ, thank you online ಎಂದು.

ಅಧ್ಯಕ್ಷರು : ಮುಗಿಸಿ.

ಶ್ರೀ ಎಸ್. ಸುರೇಶ್‌ಕುಮಾರ್ : ಒಬ್ಬ ಮುದ್ದಾದ ಶಾಲಾ ಬಾಲಕನನ್ನು ನೋಡಿದರೇನೇ ಬಡ ವಿದ್ಯಾರ್ಥಿ ಎಂದು ಕಾಣುತ್ತದೆ, ಅವನು thank you online ಅನ್ನುತ್ತಾನೆ, ನೀವು ಏನನ್ನು ಸಮಾಜಕ್ಕೆ convey ಮಾಡುತ್ತಾ ಇದ್ದೀರಾ? ಆ ಹುಡುಗನ ಮಧ್ಯಾಹ್ನದ ಊಟ ನಡೆಯುತ್ತಿರುವುದೇ on line ಇಂದ ಅಂತಾನಾ? ಇಂತಹ ಒಂದು ದುರಂತ ಒಬ್ಬ efficient Chief Minister ಎಂದು ಹೇಳಿಸಿಕೊಳ್ಳುವ ನಮ್ಮ ರಾಜ್ಯದ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಆಗಬಾರದಿತ್ತು. ನೀವು on line ಮಾಡುತ್ತೀರಾ ಮಾಡಿಕೊಳ್ಳಿ. ಶಾಲಾ ಮಕ್ಕಳ ಊಟಕ್ಕೆ ಆ ದುಡ್ಡು ಹೋಗುತ್ತದೆ. ಆದರೆ ರಸ್ತೆ ಮೇಲೆಲ್ಲಾ ಬೋರ್ಡ್ ಹಾಕಿ ಮಕ್ಕಳ ಕೈಯಲ್ಲೆಲ್ಲಾ thank you online ಎಂದು ಹೇಳಿಸಿ what message this Government is conveying? ನೀವು ಜಾಸ್ತಿ ಅವಕಾಶ ಕೊಡುತ್ತಾ ಇಲ್ಲ, ನಾನು ಇನ್ನೂ ಅನೇಕ ವಿಚಾರಗಳ ಬಗ್ಗೆ ಹೇಳಬಹುದು. ಆದುದರಿಂದ ಸಂಪೂರ್ಣವಾಗಿ ಶ್ರೀ ಸೋಮಶೇಖರ್ ಏನು ತಿದ್ದುಪಡಿ ಮಂಡಿಸಿದ್ದಾರೆ ಅದನ್ನು ನಾನು ಅನುಮೋದಿಸುತ್ತಾ ದಯವಿಟ್ಟು ಸರ್ಕಾರ ಈ ಅಧಿಸೂಚನೆಯನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಒತ್ತಾಯಿಸುತ್ತೇನೆ.

ಅಧ್ಯಕ್ಷರು : ಹೆಗ್ಡೆಯವರೆ, ಒಂದು ನಿಮಿಷ ಮಾತನಾಡಿ.

ಶ್ರೀ ಜಯಪ್ರಕಾಶ್ ಹೆಗಡೆ (ಬ್ರಹ್ಮಾವರ) : ಮಾನ್ಯ ಅಧ್ಯಕ್ಷರೇ, ನಾನು ನಿಯಮ 69ರ ಕೆಳಗೆ ನೋಟಿಸ್ ಕೊಟ್ಟು ಒಂದ್ನಿಮಿಷದಲ್ಲಿ ನೀವು ಮುಗಿಸಿ ಅಂದರೆ ಯಾವ ವಿಷಯವನ್ನೂ ಹೇಳಲು ಸಾಧ್ಯವಿಲ್ಲ.

ಅಧ್ಯಕ್ಷರು : ಈಗ ನಿಯಮ 69ರ ಕೆಳಗಿನ ನೋಟಿಸ್‌ಗಳು ಸುಮಾರು ಏಳೆಂಟು ಇವೆ. ಅದು ಇವಾಗ ಆಗುವುದಿಲ್ಲ. ವಿರೋಧ ಪಕ್ಷದ ನಾಯಕರನ್ನು ಕೂರಿಸಿಕೊಂಡು ಯಾವ್ಯಾವುದು emergency ಇದೆ ಎಂದು ನೋಡಿ ತೆಗೆದುಕೊಳ್ಳೋಣ. Not now. Not at this stage.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೇ, ಸಮಸ್ಯೆ ಇಷ್ಟೇ. ಈ ಆಕ್ಟನ್ನು ಓದಿದಾಗ, ಆವತ್ತು ನಾನು ಚರ್ಚೆ ಮಾಡುವಾಗ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. Lotteries Regulation Act, 1998 ಕೆಳಗಡೆ ಇದನ್ನು ತಂದಿದ್ದೇವೆ ಎಂದು, ನಾನು ಕೆಲವು ಸೆಕ್ಷನನ್ನು ಓದಿದರೆ...

ಅಧ್ಯಕ್ಷರು : ಬೇಡಿ ಸ್ವಾಮಿ ನಿಯಮ 69ರ ಮೇಲಿನ ಸೂಚನೆಗಳು ಸುಮಾರು ಎಂಟತ್ತು ಇವೆ. ವಿರೋಧ ಪಕ್ಷದ ನಾಯಕರನ್ನು ಕೂರಿಸಿಕೊಂಡು ಯಾವುದು ತೆಗೆದುಕೊಳ್ಳಬೇಕು ಎಂದು ಆಮೇಲೆ ತೆಗೆದುಕೊಳ್ಳೋಣ. Not now, not at this stage ಮಾನ್ಯ ಸದಸ್ಯರು ಕೊಟ್ಟಿರುವ ನಿಯಮ 69ರ ಮೇಲಿನ ಸೂಚನೆಗಳು ಸುಮಾರು 10–12 ಇವೆ, ಅದರಲ್ಲಿ ಯಾವುದು ಅರ್ಜೆಂಟಿದೆಯೋ ಅದನ್ನು ನೋಡಿ ಆಮೇಲೆ ತೆಗೆದುಕೊಳ್ಳೋಣ, ಸರ್ಕಾರವನ್ನೂ ಕೇಳಬೇಕಲ್ಲಾ ನೀವು all of a sudden 69ರ ಸೂಚನೆ ತೆಗೆದುಕೊಳ್ಳಿ ಎಂದರೆ ಹೇಗೆ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಒಬ್ಬ MSIL ಅಧಿಕಾರಿ ಬರೆದಿರುವ ಪತ್ರ ನೋಡಿದರೆ ಈ ಲಾಟರಿಯನ್ನೇ ಕ್ಲೋಸ್ ಮಾಡಬೇಕಾಗುತ್ತದೆ. ಅದರ ಬಗ್ಗೆ ನಾನು ಚರ್ಚೆ ಮಾಡಬೇಕಾಗಿದೆ.

ಅಧ್ಯಕ್ಷರು : ನಾನು ಒಂದು ನಿಮಿಷ ಕೊಡುತ್ತೇನೆ ಅಷ್ಟೇ. not beyond one minute.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಒಂದ್ನಿಮಿಷದಲ್ಲಿ ಮುಗಿಸಲು ಆಗುವುದಿಲ್ಲ.

ಅಧ್ಯಕ್ಷರು : ಹಾಗಾದರೆ ಬಿಡಿ, ತಮ್ಮ 69ರ ನೋಟಿಸ್ ಏನಿದೆ ಅದರ ಬಗ್ಗೆ ಬೇಕಾದರೆ ಸಾಯಂಕಾಲವೇ ಕರೆಸುತ್ತೇನೆ..

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಯಾವುದೇ ತರಹದ restriction ಹಾಕಿದರೆ....

ಅಧ್ಯಕ್ಷರು : ಅವರು ಒಂದ್ನಿಮಿಷದಲ್ಲಿ ಮುಗಿಸಲು ಆಗುವುದಿಲ್ಲ ಎಂದು ಹೇಳುತ್ತಿದ್ದಾರಲ್ಲಾ ಅವರು ನಿಯಮ 69ರ ಮೂಲಕ ತೆಗೆದುಕೊಳ್ಳಬೇಕು ಎಂದು ಹೇಳುತ್ತಿದ್ದಾರಲ್ಲಾ ಈಗ 69ರ ಮೂಲಕ ತೆಗೆದುಕೊಳ್ಳಲು ಆಗುವುದಿಲ್ಲ. Not at this stage.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ದಯವಿಟ್ಟು ನಮಗೂ ಒಂದು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು : ಮಾತನಾಡಿ.

ಶ್ರೀ ಡಿ.ಬಿ. ಚಂದ್ರೇಗೌಡ : ಯಾವ ವಿಚಾರವನ್ನು ರೂಲ್ 69ರ ಕೆಳಗೆ ತೆಗೆದುಕೊಳ್ಳಬೇಕು ಯಾವುದನ್ನು ತೆಗೆದುಕೊಳ್ಳಬಾರದು ಎಂಬುದು..

ಅಧ್ಯಕ್ಷರು : ಅದೇ ಹೇಳುತ್ತಿದ್ದೇನಲ್ಲಾ ಸಂಜೆ ಐದು ಗಂಟೆಗೆ ನನ್ನ ಚೇಂಬರಿಗೆ ಬನ್ನಿ, ಸರ್ಕಾರದ ಪ್ರತಿನಿಧಿಗಳನ್ನೂ ಕರೆಸೋಣ, ವಿರೋಧ ಪಕ್ಷದ ನಾಯಕರನ್ನೂ ಕರೆಸೋಣ, ಹತ್ತು ಹನ್ನೆರಡು 69ರ ಮೇಲಿನ ಸೂಚನೆಗಳು ಇವೆ, ಯಾವುದು ತೆಗೆದುಕೊಳ್ಳಬೇಕು ಎಂದು decide ಮಾಡೋಣ, I have no objection. ಈಗ ಚಂದ್ರೇಗೌಡರೇ, ಉತ್ತರ ಹೇಳಿ.

ಶ್ರೀ ಡಿ.ಬಿ. ಚಂದ್ರೇಗೌಡ : (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೇ, ಇಲ್ಲಿ ಯಾವುದನ್ನು ರೂಲ್ 69ರ ಕೆಳಗೆ ಚರ್ಚೆ ಮಾಡಬೇಕೆಂಬುದಲ್ಲ ಇರುವ ವಿಷಯ, ಇಲ್ಲಿರತಕ್ಕಂತಹದ್ದು ಸರ್ಕಾರ ಒಂದು ಶಾಸನವನ್ನು ರಚನೆ ಮಾಡಿದೆ, ಆ ಶಾಸನಕ್ಕೆ ಬೇಕಾದ ನಿಯಮಗಳನ್ನು ನಾವು ರಚನೆ ಮಾಡುತ್ತೇವೆ. ಯಾವ ಮಸೂದೆಯನ್ನು ಈ ಸದನ ಮಂಜೂರು ಮಾಡಿಕೊಟ್ಟಿದೆಯೋ ಅದಕ್ಕೆ ಸರ್ಕಾರ ನಿಯಮಗಳನ್ನು ರಚನೆ ಮಾಡುತ್ತದೆ. ನಿಯಮಾನುಸಾರ ನಾವು ಆ ನಿಯಮಗಳನ್ನು ಈ ಸದನದ ಮುಂದೆ ಇಟ್ಟಿದ್ದೇವೆ. ಇದಕ್ಕೆ ಸಂಬಂಧಪಟ್ಟ ಸದಸ್ಯರು ಆ ನಿಯಮಗಳಲ್ಲಿ ತಿದ್ದುಪಡಿ ಮಾಡಬೇಕೆಂದು ಹಿರಿಯ ಸದಸ್ಯರಾದ ಶ್ರೀ ಸೋಮಶೇಖರ್ ಅವರು ಒಂದು ಪ್ರಸ್ತಾವನೆ ಕಳುಹಿಸಿದ್ದಾರೆ. ನಾನು ಅದಕ್ಕೆ ತಮ್ಮ ಗಮನಕ್ಕೆ ತರುವುದೇನೆಂದರೆ, ಇಂಥ ಪ್ರಸ್ತಾವನೆಗಳು ಬಂದಾಗ ಕೆಲವು ವಿಚಾರಗಳನ್ನು ಹೇಳದಿದ್ದರೆ ಸದನಕ್ಕೆ ಅಪಚಾರವಾಗುತ್ತದೆ. 'After the order is laid on the table, any Member may give notice of this intention to move a motion or motions for modification of that order. Notice not given by a Member also....' if you feel like that he can participate in the debate. ಆದರೆ ಯಾವ ಸದಸ್ಯರು ನೋಟೀಸನ್ನು ಕೊಟ್ಟಿದ್ದಾರೋ ಆ

ಸದಸ್ಯರು ಮಾತ್ರ ಮಾತನಾಡುವುದಕ್ಕೆ ಇದರಲ್ಲಿ ಅವಕಾಶ ಇದೆ: ಇದು ಒಂದು. ಎರಡನೆಯದು ನೋಟೀಸ್‌ನಲ್ಲಿ ಅವರೇನು ದೋಷಗಳ ಬಗ್ಗೆ ಹೇಳಿದ್ದಾರೆ, ಅದನ್ನು ವಿತ್ ಡ್ರಾ ಮಾಡಬೇಕೆಂದು ಹೇಳಿದ್ದಾರೆ, ಅದ್ಯಾವುದೂ ಸಕಾರಣಗಳಲ್ಲ. ನಾವು ಶಾಸನದ ಕೆಳಗಡೆ ಮಾಡಿರತಕ್ಕಂಥ ನಿಯಮಗಳೇನು ಇವೆ, ಈ ನಿಯಮಗಳು ಅದಕ್ಕೆ ಬಾಧಕವಾಗಿದ್ದರೆ, ಮೆಯಿನ್ ಆ್ಯಕ್ಟ್‌ಗೆ ಬಾಧಕವಾಗಿದ್ದರೆ ಚರ್ಚೆ ಮಾಡಬಹುದು. ನಾವೇನು ಶಾಸನವನ್ನು ರಚನೆ ಮಾಡಿದ್ದೇವೆ, ಅದಕ್ಕೆ ಪೂರಕವಾಗಿರತಕ್ಕಂಥ ನಿಯಮಾವಳಿಗಳನ್ನು ನಾವು ರಚನೆ ಮಾಡಿದ್ದೇವೆ. Only to execute the Act passed by this august House, we have enacted certain rules. We have framed rules for the purpose of giving effect to the Act, ಅಷ್ಟೇ. ಆದ್ದರಿಂದ as long as the Act is valid, if the rules framed are against the main Act, then they can have objections. This is number one. Number two, all the legislations ಮೇಲೆ ನಾವೇನು ನಿಯಮಗಳನ್ನು ರಚನೆ ಮಾಡುತ್ತೇವೆ, ಅವುಗಳನ್ನೆಲ್ಲಾ ಶಾಸನ ಸಭೆಯ ಮುಂದೆ ಇಡಬೇಕೆಂಬ ನಿಯಮವಿಲ್ಲ. ಕೆಲವು ಸಾರಿ ಇದು ನಿಧಾನವಾಗುತ್ತದೆ. ಇದು ಈ ಕಾಲಕ್ಕೆ ಎಂದು ಇಲ್ಲ. ಎಲ್ಲಾ ಕಾಲಕ್ಕೂ ಈ ನಿಯಮಗಳು ನಿಧಾನವಾಗುತ್ತಾ ಬರುತ್ತಿವೆ. ಅದರಲ್ಲಿ ಅವರೇನು ಸೂಚನೆ ಮತ್ತು ಸಲಹೆಗಳನ್ನು ಮಾಡಿದ್ದಾರೆ, ಅದನ್ನು ನಾನು ಒಪ್ಪುತ್ತೇನೆ. ಸಾಧ್ಯವಾದಷ್ಟು ಬೇಗ ಈ ನಿಯಮಗಳನ್ನು ಸದನದ ಮುಂದೆ ಇಡಬೇಕು ಎನ್ನತಕ್ಕಂಥದ್ದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಆದರೆ ಈ ನಿಯಮಗಳನ್ನು ಸದನದಲ್ಲಿ ಇಡಲಿಲ್ಲ ಎನ್ನುವ ಒಂದು ಅಪರಾಧಕ್ಕಾಗಿ ಆ ನಿಯಮಗಳು ಕಾನೂನು ಬಾಹಿರವಾಗುವುದಿಲ್ಲ ಎನ್ನುವಂಥದ್ದನ್ನೂ ಸದನದ ಗಮನಕ್ಕೆ ತರುತ್ತಿದ್ದೇನೆ. ಕಾನೂನು ಬಾಹಿರವಾಗುವುದಿಲ್ಲವೆನ್ನುವುದಕ್ಕೆ ಸರ್ವೋಚ್ಚ ನ್ಯಾಯಾಲಯದ ತೀರ್ಮಗಳೇ ಇವೆ. ಅದನ್ನು ಬೇಕಾದರೆ ಸದನದ ಮುಂದೆ ಇಡುತ್ತೇನೆ. ಇದು ನಾನು ಹೇಳಿದ ಹಾಗೆ ನಾವು ನಿಯಮಗಳನ್ನು ರಚನೆ ಮಾಡತಕ್ಕಂಥಾದ್ದು ಮೂಲ ಶಾಸನಕ್ಕೆ, ಆ ಶಾಸನದಲ್ಲಿ, ನಿಯಮಗಳನ್ನು ಮಾಡಿರತಕ್ಕಂಥದ್ದರಲ್ಲಿ ದೋಷ ಇದೆ ಎಂದು ಸಂಬಂಧವನ್ನು ಕಲ್ಪಿಸುವುದಕ್ಕೆ ಏನಾದರೂ ಪ್ರಯತ್ನ ಮಾಡಿದರೆ, ಆ ನಿಯಮಗಳನ್ನು ಸದನದ ಮುಂದೆ ಇಡಬಾರದು ಎನ್ನತಕ್ಕಂಥದ್ದು ಸರಿಯಾದ ಕ್ರಮವಲ್ಲ. ಆದ್ದರಿಂದ ಈಗ ಅವರೊಂದು ಪ್ರಸ್ತಾವನೆಯನ್ನು ಕೊಟ್ಟಿದ್ದಾರೆ, ಆ ಪ್ರಸ್ತಾವನೆ "2001ರ ಕರ್ನಾಟಕ ಗಣಕೀಕೃತ ನೆಟ್‌ವರ್ಕ್ ಲಾಟರಿ ನಿಯಮಗಳನ್ನು ರಚಿಸಿ ದಿನಾಂಕ 16-5-2001 ರಂದು ಹೊರಡಿಸಲಾದ ಆಇ: 181: ಸಉಲಾ 2000ನೇ ಸಂಖ್ಯೆಯ ಅಧಿಸೂಚನೆ, ಮತ್ತೊಂದು 1999ರ ಕರ್ನಾಟಕ ರಾಜ್ಯ ಲಾಟರಿ ನಿಯಮಗಳನ್ನು ರಚಿಸಿ, ದಿನಾಂಕ: 8-9-2000 ಎಂದು ಹೊರಡಿಸಲಾದ ಆಇ:117:ಸಉಲಾ: 1997ನೇ ಸಂಖ್ಯೆಯ ಅಧಿಸೂಚನೆ" ಇವುಗಳನ್ನು ಸರ್ಕಾರದ ಹಿಂದಕ್ಕೆ ಪಡೆಯಬೇಕು ಎಂದು. ನಾನು ಅದಕ್ಕೆ ಹೇಳಿದೆ, ಮೂಲ ಶಾಸನಕ್ಕೆ ವಿರೋಧವಾದಂಥ ನಿಯಮಗಳನ್ನು ನಾವು ಮಾಡಿಲ್ಲ. ಮೂಲ ಶಾಸನಕ್ಕೆ ಪೂರಕವಾಗಿರತಕ್ಕಂಥ ನಿಯಮಗಳನ್ನೇ ಸರ್ಕಾರ ಮಾಡಿದ್ದೇವೆ, ತುಂಬಾ ಆಲೋಚನೆ ಮಾಡಿ ಈ ಶಾಸನವನ್ನು ಜಾರಿಗೆ ಕೊಡುವುದಕ್ಕೆ ಮಾಡಿರತಕ್ಕ ನಿಯಮಗಳಲ್ಲಿ ಅವರೇನು ದೋಷವನ್ನು ಹುಡುಕುವುದಕ್ಕೆ ಪ್ರಯತ್ನವನ್ನು ಮಾಡಿದ್ದಾರೆ, ಆ ದೋಷ ಈ ನಿಯಮಗಳ

ಬದಲಾವಣೆಯಿಂದ ಆಗುವುದಿಲ್ಲ. ಆಗಬೇಕು ಎಂದಾದರೆ ಆ ಶಾಸನ ಬಂದಾಗಲೇ ಚರ್ಚೆ ಮಾಡಬಹುದು. ಆ ಶಾಸನದಲ್ಲಿ ದೋಷ ಇದ್ದರೆ ನಿಯಮಗಳನ್ನು ತಿದ್ದಿದರೆ ಆಗುತ್ತದೆಯೇ? ಬಾಲ ಕತ್ತರಿಸಿಬಿಟ್ಟರೆ ಆನೆ ಎನ್ನುವುದು ಹೋಗಿಬಿಡುತ್ತದೆಯೇ? ಆನೆ ಆನೆಯಾಗಿಯೇ ಇರುತ್ತದೆ. ಶಾಸನ ಆನೆಯಾಗಿರುತ್ತದೆ. ಬಾಲವನ್ನು ಕತ್ತರಿಸಬೇಕು ಎಂದು ನೀವು ನಿಯಮ ಮಾಡಿದ್ದೀರಿ ಎಂದು ಹೇಳಿದರೆ I don't think it is a valid argument. Therefore, it should not be accepted.

ಗೊಂದಲ

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ : ನಮ್ಮ ನೋಟೀಸೂ ತಮ್ಮ ಮುಂದೆ ಇದೆ. ನಾವು ಕಾಲಿಂಗ್ ಅಟೆನ್‌ಷನನ್ನು ಕೊಟ್ಟಿದ್ದೇವೆ.

ಅಧ್ಯಕ್ಷರು : ತಾವು ಅದಕ್ಕೆ ಸಿಗ್ನೇಚರ್ ಮಾಡಿಲ್ಲ. ದಯವಿಟ್ಟು ಕುಳಿತುಕೊಳ್ಳಿ.

ಗೊಂದಲ

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ನಾನು ಕಂಪ್ಲೀಟ್ ಮಾಡುತ್ತೇನೆ. ಆದ್ದರಿಂದ ತಮಗೆ ಈಗ ಇರತಕ್ಕಂಥದ್ದು ಈ ನಿಯಮಗಳನ್ನು ಸದನದಲ್ಲಿ ಇಟ್ಟಮೇಲೆ ಏನು ಅವರು ತಮ್ಮ ಪ್ರಸ್ತಾವನೆಯನ್ನು ಮಂಡಿಸಿದ್ದಾರೆ, ತಮಗೆ ಈಗ ಇರತಕ್ಕಂಥದ್ದು ಈ ಪ್ರಸ್ತಾವನೆಯನ್ನು ಮುಂದೆ ಸಬಾರ್ಡಿನೇಟ್ ಲೆಜಿಸ್‌ಲೇಷನ್‌ಗೆ ಅಥವಾ ಸಂಬಂಧಪಟ್ಟಂಥದ್ದಕ್ಕೆ ಕಳುಹಿಸಿಕೊಡಬೇಕೇ, ಅಥವಾ ಬೇಡವೇ? ಹಾಗೆ ಕಳುಹಿಸಿಕೊಡಬೇಕು ಎಂದು ಹೇಳಿ ಇದ್ದರೆ ಅವರು ಸದನದ ಮುಂದೆ ಇಟ್ಟಿರತಕ್ಕ ನಿಯಮಗಳನ್ನು ತಾವು ಮತಕ್ಕೆ ಹಾಕಬೇಕು. ಹಾಗೆ ಮತಕ್ಕೆ ಹಾಕುವಾಗ ನಾನು ಮೊದಲೇ ಹೇಳಿದಹಾಗೆ ಮೂಲ ನಿಯಮಕ್ಕೆ ವಿರುದ್ಧವಾಗಿದೆ ಎಂಬುದನ್ನು ಅವರು ಶಾಸನಸಭೆಗೆ ತಿಳಿಸಬೇಕು. ಇಲ್ಲದಿದ್ದರೆ ಅದಕ್ಕೆ ಸಂಬಂಧಪಟ್ಟ ಹಾಗೆ ಸಮಿತಿ ಇದೆ. ಆ ಸಮಿತಿಯ ವರದಿ ಹೋದಮೇಲೆ ಮಾಡಬಹುದು. ಆದಕಾರಣ ಇವತ್ತು ತಮ್ಮ ಮುಂದೆ ಇರತಕ್ಕ ಪ್ರಶ್ನೆ ನಿಯಮ 69ಕ್ಕೆ ಬದಲಾವಣೆಯೂ ಅಲ್ಲ, ಎಲ್ಲರೂ ಚರ್ಚೆ ಮಾಡಬೇಕಾದ ವಿಚಾರವೂ ಅಲ್ಲ. ನೋಟೀಸ್ ಕೊಟ್ಟಿರತಕ್ಕ ಒಬ್ಬ ಸದಸ್ಯ ಈ ಸದನದಲ್ಲಿ ನಮಗೆ ಕನ್‌ವಿನ್ಸಿಂಗ್ ಆಗಿ ಇದು ಸರಿಯಾಗಿಲ್ಲ, ಮೂಲ ಶಾಸನಕ್ಕೆ ಸರಿಯಾಗಿಲ್ಲ. ವಿರುದ್ಧವಾಗಿದೆ ಎನ್ನತಕ್ಕಂಥ ವಾದವನ್ನು ಅವರೇನು ಮಂಡನೆ ಮಾಡಿಲ್ಲ. ಆದ್ದರಿಂದ ಇದನ್ನು ತಿರಸ್ಕರಿಸಬೇಕು. ಹಾಗೆ ತಿರಸ್ಕರಿಸುವಾಗ ತಮಗೆ ಅಗತ್ಯಬೇಕು ಎಂದು ಕಂಡರೆ ಸದನದ ಮತಕ್ಕೆ ಹಾಕಬಹುದು. ಅದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ.

ಗೊಂದಲ

Mr. Speaker : I don't allow anybody except Mr. Somashekhar. ದಯವಿಟ್ಟು ಬೇಕಾಗಿಲ್ಲ, ಸೋಮಶೇಖರ್‌ರವರೆ, ತಾವು ಮಾಡತನಾಡುತ್ತೀರೋ ಇಲ್ಲವೋ? ತಾವು ಹೇಳಿ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ : ಮಾನ್ಯ ಅಧ್ಯಕ್ಷರೇ, ತಾವೇ ರೂಲಿಂಗನ್ನು ಕೊಟ್ಟಿದ್ದೀರಿ. ಇದು ಒಂದು ಸಾರಿ ಈ ಸದನದ ಆಸ್ತಿಯಾಗುತ್ತದೆ. ಯಾರು ಬೇಕಾದರೂ ಮಾತನಾಡಬಹುದು ಎಂದು ಹೇಳಿದ್ದೀರಿ. ಆದ್ದರಿಂದ ಗೌರವಾನ್ವಿತ ಸದಸ್ಯರುಗಳಿಗೆ ಮಾತನಾಡಲು ಅವಕಾಶ ಕೊಡಬೇಕಾಗುತ್ತದೆ.

ಗೊಂದಲ

Mr. Speaker : When I am not allowing.

ಯಾರು ಬೇಕಾದರೂ ಹೇಗೆ ಮಾತನಾಡುವುದಕ್ಕಾಗುತ್ತದೆ?

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ : ತಾವು ಏಕೆ ಅಲೋ ಮಾಡುವುದಿಲ್ಲ? ನಾವು ನೋಟೀಸ್ ಕೊಟ್ಟಿದ್ದೇವೆ.

ಅಧ್ಯಕ್ಷರು : ಅದು ಬೇರೆ ವಿಷಯ. That is a different issue. ನೋಡಿ, ನಾನು ನೂರು ಜನರಿಗೂ ಇಲ್ಲಿ ಅಲೋ ಮಾಡುವುದಕ್ಕಾಗುವುದಿಲ್ಲ. ತಾವು ಎದ್ದು ನಿಂತರೆ ಬೇರೆಯವರೂ ಎದ್ದು ನಿಲ್ಲುತ್ತಾರೆ. ಸೋಮಶೇಖರ್, ತಾವು ಏನಾದರೂ ಹೇಳುವುದು ಇದ್ದರೆ ಬೇಗನೆ ಹೇಳಬಹುದು. Then I will put to vote.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ : ಕೋಟ್ಯಾಂತರ ರೂಪಾಯಿಗಳ ಲುಕ್ಸಾನು ಆಗುತ್ತಿದೆ, ಅವ್ಯವಹಾರವಾಗುತ್ತಿದೆ.

ಗೊಂದಲ

Mr. Speaker :I can allow only Mr. Somashekhar. I don't allow anybody.

ಮಾನ್ಯ ಸೋಮಶೇಖರ್ ರವರೇ, ಮಾನ್ಯ ಮಂತ್ರಿಗಳೇನು ಉತ್ತರವನ್ನು ಕೊಟ್ಟರೋ, ಅದಕ್ಕೇನಾದರೂ ಹೇಳುವುದಿದ್ದರೆ ಹೇಳಿ. ಮಾನ್ಯ ಸೋಮಶೇಖರ್, ತಾವು ಹೇಳುತ್ತೀರೋ ಇಲ್ಲವೋ?

ಗೊಂದಲ

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ : ಮಾನ್ಯ ಸಭ್ಯಾಕ್ಷರೇ, ತಾವು ನಮಗೆ ಅವಕಾಶವನ್ನು ಕೊಡುತ್ತೀರೋ ಇಲ್ಲವೋ?

ಅಧ್ಯಕ್ಷರು : ಇಲ್ಲ. ಅವಕಾಶವನ್ನು ಕೊಡುವುದಕ್ಕಾಗುವುದಿಲ್ಲ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ : ಏಕೆ ಸಾರ್ ಕೊಡುವುದಕ್ಕಾಗುವುದಿಲ್ಲ?

ಅಧ್ಯಕ್ಷರು : ಆಗುವುದಿಲ್ಲ. I am not allowing. ಅವರ ಜೊತೆಯಲ್ಲಿ ತಾವು ಸಿಗ್ನೇಚರ್ ಮಾಡಿಲ್ಲ.

ಗೊಂದಲ

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ : ಕೋಟ್ಯಾಂತರ ರೂಪಾಯಿಗಳು ಈ ಸರ್ಕಾರಕ್ಕೆ ಲುಕ್ಸಾನಾಗುತ್ತಿದೆ. ಅದಕ್ಕಾಗಿ ನಾವು ಪ್ರಸ್ತಾವನೆ ಮಾಡುತ್ತಿದ್ದೇವೆ.

Mr. Speaker : It is restricted only to the person who has raised the subject. I can't allow. ಮಾನ್ಯ ಸೋಮಶೇಖರ್‌ರವರೇ, ತಾವು ಮಾತನಾಡದಿದ್ದರೆ ನಾನು ವೋಟಿಂಗ್‌ಗೆ ಹಾಕುತ್ತೇನೆ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಸಭಾಧ್ಯಕ್ಷರೇ, ಈಗ ಮಾನ್ಯ ಕಾನೂನು ಮಂತ್ರಿಗಳು ಈ ಶಾಸನ ಮಾಡತಕ್ಕ ಅಧಿಕಾರ, ಆ್ಯಕ್ಟ್ ಮಾಡತಕ್ಕ ಅಧಿಕಾರ ಈ ಸದನಕ್ಕೆ ಇದೆ. ಏನು ರೂಲ್ಸ್‌ಗಳನ್ನು ಮಾಡುತ್ತೇವೆ ಆ ರೂಲ್ಸ್ ಆ್ಯಕ್ಟ್‌ನ ಅಡಿಯಲ್ಲಿ ಪೂರಕವಾಗಿರುತ್ತದೆಂದು ಹೇಳಿದರು. ನಾನು ಅದನ್ನು

ಒಪ್ಪಿಕೊಳ್ಳುತ್ತೇನೆ. ಅದು ನನಗೆ ಗೊತ್ತು. The power to frame the rules will have to be drawm from the Act. But, all the rules which are drawn from the Act are not in the interest of the State. ನಾವು ಇಲ್ಲಿ ಹೇಳುತ್ತಿರುವಂಥದ್ದು ಏಕೆಂದರೆ, 1997ರಲ್ಲಿ ಸಿಇಟಿ ಆಕ್ಟ್‌ನ ಅಡಿಯಲ್ಲಿ ರೂಲ್ಸ್‌ನ್ನು ಮಾಡಿದೆವು. The power to frame the rules in 1997 was drawn from the Education Act which was formulated in 1983 and assent was given by the President in 1985. ಹತ್ತು ವರ್ಷಗಳು ಅಸೆಂಟ್ ಸಿಕ್ಕಿಲ್ಲ. ಆದ್ದರಿಂದ ನಾವು ಈ ರೂಲ್ಸ್ ಮಾಡಿದವು. ಅದು In the interest of the State, ಆಯಿತು. But, the rules which we have framed here under the lottery Act are against the interest of the State and against the welfare of the people. ಆ ದೃಷ್ಟಿಯಿಂದ ನಾನು ಹೇಳುತ್ತಿರತಕ್ಕಂಥದ್ದು. All rules framed under the Act are not in the interest of the people. ಈಗ ಏನು ರೂಲ್ಸ್‌ನ್ನು ತಂದಿದ್ದೀರಿ, ನಿದರ್ಶನಗಳು ಇವೆ ಮಾನ್ಯ ಸಭಾಧ್ಯಕ್ಷರೇ. ಪಾರ್ಲಿಮೆಂಟಿನಲ್ಲಿ ಎಷ್ಟೋ ಸಾರಿ ವಿರೋಧ ಪಕ್ಷದವರು ಇಂಥ ಒಂದು ಅಮೆಂಡ್‌ಮೆಂಟ್ ತಂದಂಥ ವಿಚಾರದಲ್ಲಿ ಎಷ್ಟೋ ನೋಟಿಫಿಕೇಷನ್‌ಗಳನ್ನು ವಿತ್‌ಡ್ರಾ ಮಾಡಿರತಕ್ಕಂಥ ನಿದರ್ಶನಗಳಿವೆ. ತಾವು ಅದನ್ನು ತರಿಸಿಕೊಂಡು ನೋಡಿ. ಅಷ್ಟೊಂದು ಗೌರವವನ್ನು ವಿರೋಧ ಪಕ್ಷಕ್ಕೆ ಕೊಟ್ಟಿದ್ದಾರೆ. ಏನಾದರೂ ವಿರೋಧ ಪಕ್ಷದವರು ರಾಜ್ಯದ ಹಿತದೃಷ್ಟಿಯಿಂದ ಕೆಲವು ಸಲಹೆಗಳನ್ನು ಕೊಟ್ಟಾಗ ಆಡಳಿತ ಪಕ್ಷದವರು ಒಪ್ಪಿಕೊಳ್ಳತಕ್ಕಂಥ ಔದಾರ್ಯತೆ, ಸೌಜನ್ಯತೆಯನ್ನು ತೋರಿಸಬೇಕಾಗುತ್ತದೆ. ಇದು ನಾನು ಎತ್ತಿರತಕ್ಕಂಥ ವಿಚಾರ, ತಾವೇ ಯೋಚನೆ ಮಾಡಿ. ತಮ್ಮ ಆತ್ಮ ಮುಟ್ಟಿಕೊಂಡು ಯೋಚನೆ ಮಾಡಿ. ಇದರಿಂದ ಸಮಾಜ ಹಾಳಾಗುತ್ತಿದೆ, ಸಾವಿರಾರು ಕೋಟಿ ರೂ. ಲಾಸ್ ಆಗುತ್ತಿದೆ. ಇವತ್ತು ನಾನು ಅನೇಕ ವಿಚಾರಗಳನ್ನು ಹೇಳಿದೆ. ಇದು ಪಿಲ್ ಫರೇಜ್ ಆಗುತ್ತಿದೆ. ಕಂಟ್ರೋಲ್ ಇಲ್ಲ. ಇವತ್ತು ನಿಯಮಾವಳಿಗಳ ಪ್ರಕಾರ ಲಾಟರಿ ನಡೆಯುತ್ತಿಲ್ಲ. ನೂರು ಕೋಟಿ ರೂ. ಎಂದು ಹೇಳುತ್ತೀರಿ. ಆದರೆ ಸಾವಿರಾರು ಕೋಟಿ ರೂ. ಕಲೆಕ್ಟ್ ಆಗುತ್ತಿದೆ. ಎಷ್ಟು ಟಿಕೆಟ್ ಮಾರುತ್ತಿದ್ದೀರಿ ಎಂದು ಲೆಕ್ಕ ಇಲ್ಲ. ಎಷ್ಟು ಏಜೆಂಟ್ ಗಳು ಇದ್ದಾರೆ ಎಂದು ಲೆಕ್ಕ ಇಲ್ಲ. ಎಷ್ಟು ಹಣವನ್ನು ಸರ್ಕಾರಕ್ಕೆ ಪಾವತಿ ಮಾಡಿದ್ದಾರೆ ಎಂದು ಲೆಕ್ಕ ಇಲ್ಲ. ನೀವು ಲೆಕ್ಕಕ್ಕೆ ಮಾತ್ರ ನೂರು ಕೋಟಿ ರೂಗಳನ್ನು ತೋರಿಸಿ ಸಾವಿರಾರು ಕೋಟಿ ರೂಪಾಯಿಗಳನ್ನು ಅವರು ಹೊಡೆಯುತ್ತಿದ್ದಾರೆ. ಒಂದು ಕಡೆ ಸರ್ಕಾರದ ಬೊಕ್ಕಸಕ್ಕೆ ಆ ಸಾವಿರಾರು ಕೋಟಿ ರೂ.ನಷ್ಟವಾಗಿ ಹೋಗುತ್ತಿರುವುದಲ್ಲದೆ ಇವತ್ತು ಇಡೀ ಸಾರ್ವಜನಿಕರ ಪರಿಸ್ಥಿತಿ ಏನಾಗಿದೆ? ಇವತ್ತೆಲ್ಲಾ ಅವರೂ ಹುಚ್ಚರಾಗುತ್ತಿದ್ದಾರೆ. ಇವತ್ತು ಮಧ್ಯಮ ವರ್ಗದವರೆಲ್ಲಾ ದಿವಾಳಿಯಾಗುತ್ತಿದ್ದಾರೆ.

1.00 ಪಿ ಎಂ

ಅಂತಹ ಒಂದು ನಿಯಮಾವಳಿಯನ್ನು ತಂದು ಏಕೆ ಸಮಾಜವನ್ನು ಹಾಳು ಮಾಡುತ್ತಿದ್ದೀರಿ? ಆ ನಿಯಮಾವಳಿ ಸರಿ ಇಲ್ಲ ಎಂದು ನಾವು ಹೇಳತಕ್ಕದ್ದು. ನೀವು ಬೇರೆ ರೀತಿ ಬದಲಾವಣೆ ಮಾಡಿ ಅಥವಾ ಬೇರೆ ಪ್ರಕಾರ ಮಾಡಿ. ತಮಗೆ ಅಧಿಕಾರ ಇದೆ. ಇದು ರಾಜ್ಯದ ಹಿತದೃಷ್ಟಿಯಿಂದ ತಂದಿರತಕ್ಕಂಥ ನಿಯಮಾವಳಿ ಅಲ್ಲ; ನೋಟಿಫಿಕೇಶನ್ ಅಲ್ಲ. ಇದು ಸಮಾಜಘಾತುಕತನದ ಒಂದು ನೋಟಿಫಿಕೇಶನ್. ಇದನ್ನು ವಿತ್‌ಡ್ರಾ ಮಾಡಬೇಕು ಎನ್ನುವುದು

ನಮ್ಮ ಅಭಿಪ್ರಾಯ. ಪಾರ್ಲಿಮೆಂಟಿನಲ್ಲಿ ಸಹ ವಿತ್‌ಡ್ರಾ ಮಾಡಿರತಕ್ಕಂಥಹ ನಿದರ್ಶನಗಳು ಉಂಟು. ತಾವು ಬೇಕಾದರೆ ತರಿಸಿಕೊಂಡು ನೋಡಿ.

ಶ್ರೀ ಡಿ.ಬಿ. ಚಂದ್ರೇಗೌಡ : ನಿದರ್ಶನ ಇಲ್ಲ ಎಂದು ನಾನು ಹೇಳಲೇ ಇಲ್ಲ.

Sri. B. Somashekar : I would like to put his question. ಈ ಒಂದು ಯೋಜನೆ ಸಮಾಜಕ್ಕೆ ಒಳ್ಳೆಯದು ಆಗಿದೆಯೇ? ಸರ್ಕಾರಕ್ಕೆ ಒಂದು ರೂಪಾಯಿ ಹಾಳಾಗದೆ ಪಿಲ್ ಫರೇಜ್ ಆಗದೇ ಬರುತ್ತಿದೆ ಎಂದು ನಿಮ್ಮ ಆತ್ಮ ಒಪ್ಪಿದರೆ ನೀವು ಡಿವಿಜನ್ ಮಾಡಿಸಿ ಚಿಂತೆ ಇಲ್ಲ. ಜನಗಳಿಗೆ ಗೊತ್ತಾಗಲಿ. ಯಾರು ಈ ಲಾಟರಿ ಪರವಾಗಿ ಇದ್ದಾರೆ? ಯಾರು ಈ ಲಾಟರಿ ಬೇಡ ಎಂದು ಹೇಳುತ್ತಾರೆ ಎಂದು. ಅದನ್ನು ಡಿಚಿಜನ್ ಮಾಡಿಸಿ ಚಿಂತೆ ಇಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಲಾಟರಿ ಆಕ್ಟ್ ಇದೆಯಲ್ಲಾ ಇದು ಸೆಂಟ್ರಲ್ ಆಕ್ಟ್. ನಮ್ಮ ರಾಜ್ಯ ಸರ್ಕಾರ ಲಾಟರಿ ಆಕ್ಟ್ ಎಂದು ಏನು ತಂದಿಲ್ಲ. 1999ನೇ ಇಸವಿಯಲ್ಲಿ Act of Parliament ಎಂದಾಯಿತು. We have introduced rules. Two sets of rules ಮಾಡಿದ್ದೇವೆ. One is regarding the conventional lottery and the other one is regarding non-conventional i.e. on-line lottery. Original Act is an Act of Parliament. ಅದರಲ್ಲಿ ರೂಲ್ಸ್ ಫ್ರೇಮ್ ಮಾಡಿರತಕ್ಕದ್ದು ತಪ್ಪು ಎಂದು ಹೇಳಿದರೆ, if it is against the interest or implementation of the original Act, ಆಗ ಅವರು ಹೇಳುವುದು ಸರಿ. ಅದಕ್ಕೆ ಬಾಧಕವಲ್ಲದಿದ್ದರೆ ಯಾವುದೇ ರಾಜ್ಯ ಸರ್ಕಾರ ತನ್ನ ರಾಜ್ಯದ ಇತಿ ಮಿತಿಗಳನ್ನು ಅರ್ಥ ಮಾಡಿಕೊಂಡು ಅದರಿಂದ ಸಮಾಜಕ್ಕೆ ಏನಾದರೂ ಬಾಧಕ ಆಗುತ್ತದೋ, ಮತ್ತೊಂದಕ್ಕೆ ಆಗುತ್ತದೋ ಎಂಬುದನ್ನು ನೋಡಬೇಕಾಗುತ್ತದೆ. ಈಗ ಎಲ್ಲರೂ ಸನ್ಯಾಸಿಗಳೇನೂ ಅಲ್ಲ. ಈ ರಾಜ್ಯದಲ್ಲಿ ಆಗಲೀ ಅಥವಾ ದೇಶದಲ್ಲಿ ಆಗಲೀ ಎಲ್ಲರೂ ಸನ್ಯಾಸಿಗಳೇನೂ ಇಲ್ಲ. ಒಂದಲ್ಲ ಒಂದು ರೀತಿಯ ಗ್ಯಾಂಬ್ಲಿಂಗ್ ನಡೆಯುತ್ತಿದೆ. ಆ ಗ್ಯಾಂಬ್ಲಿಂಗ್‌ನ್ನು ಯಾವ ರೀತಿ ನಡೆಸಬೇಕು? ರೆಗ್ಯುಲೇಟ್ ಮಾಡಬೇಕು ಎನ್ನತಕ್ಕದ್ದು ಸರ್ಕಾರದ ಇಚ್ಛೆ. ಇದಕ್ಕೆ ಕೇಂದ್ರ ಸರ್ಕಾರದ ಪರವಾನಗಿ ಶಾಸನದ ಮೂಲಕ ಸಿಕ್ಕಿದೆ. ಕೇಂದ್ರ ಸರ್ಕಾರಕ್ಕೆ ಹೇಳಿ ಆಕ್ಟನ್ನೇ ಬದಲಾವಣೆ ಮಾಡಿಸುವುದಿದ್ದರೆ ಮಾಡಿ. ಅದು ಬಿಟ್ಟು ಬೇರೆ ವಿಚಾರ ಇಲ್ಲ. ಅದಕ್ಕೇ ನಾನು ಹೇಳಿದೆ, ಆನೆಯಷ್ಟು ಬಲವಾದಂತಹ ಒಂದು ಶಾಸನ ಇದು. ಅದರ ಬಾಲ ಕತ್ತರಿಸಿ ಬಿಟ್ಟರೆ ಆನೆ ಸಾಯುತ್ತದೇನು? ನಾನು ಸೀಮಿತವಾಗಿ ಅಷ್ಟೇ ಕೇಳಿದೆ?

ಶ್ರೀ ಬಿ. ಸೋಮಶೇಖರ್ : ರೂಲ್ಸ್ ಮಾಡಬೇಕು ಎಂದೇನೂ ಇಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಸೀಮಿತವಾಗಿ ನಾನು ರಾಜ್ಯ ಸರ್ಕಾರ has taken a conscious decision while enacting the rules to the original Act. ಎಂದು ಆಗಲೇ ಹೇಳಿದೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಇದು ಶಾಸನದ ಪ್ರಕಾರ ನಡೆಯುತ್ತಿಲ್ಲ ಎನ್ನುವುದೇ ನಮ್ಮ ಕೇಸು. ಸೆಂಟ್ರಲ್ ಆಕ್ಟ್ ಕೆಳಗಡೆ ನಡೆಯುತ್ತಿಲ್ಲ ಎಂದು ಹೇಳುವುದೇ ನಮ್ಮ ಕೇಸು. ಅದಕ್ಕೇ ನಾವು ಚರ್ಚೆಗೆ ಅವಕಾಶ ಕೊಡಿ ಎಂದು ಹೇಳುತ್ತಿರುವುದು. ರೂಲ್ಸ್ ಮಾತ್ರವಲ್ಲ.

ಅಧ್ಯಕ್ಷರು : ಈಗ ಪ್ರಸ್ತಾವವನ್ನು ಮತಕ್ಕೆ ಹಾಕುತ್ತೇವೆ. ಪ್ರಸ್ತಾವ ಹೀಗಿದೆ.

"2001ರ ಕರ್ನಾಟಕ ಗಣಕೀಕೃತ ನೆಟ್‌ವರ್ಕ್ ಲಾಟರಿ ನಿಯಮಗಳನ್ನು ರಚಿಸಿ, ದಿನಾಂಕ 16.5.2001 ರಂದು ಹೊರಡಿಸಲಾದ ಆಇ:181:ಸಉಲಾ: 2000ನೇ ಸಂಖ್ಯೆಯ ಅಧಿಸೂಚನೆ"

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ : ಸಾರ್, ದಯವಾಡಿ ಚರ್ಚೆಗೆ ಅವಕಾಶ ಮಾಡಿಕೊಡಬೇಕು.

Mr. Speaker : I cannot allow. ನಾನು ಇದನ್ನು ಮತಕ್ಕೆ ಹಾಕ-ಬೇಕಾಗಿರುತ್ತದೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಹಾಗಾದರೆ ಯಾವುದಾದರೂ ಬಿಲ್ ಇಂಟ್ರಡ್ಯೂಸ್ ಮಾಡಿದಾಗ ಬೇರೆಯವರಿಗೆ ಚರ್ಚೆ ಮಾಡಲು ಅವಕಾಶ ಇಲ್ಲವೇ? ಬರೇ ಕಾನೂನು ಸಚಿವರು ಮಾತ್ರ ಮಾತನಾಡಲಿಕ್ಕೆ ಆಗುತ್ತದೆಯೇ? ಎಲ್ಲರೂ ಮಾತನಾಡಬೇಕಾಗುತ್ತದೆ.

ಗೊಂದಲ

ಮಾನ್ಯ ಸದಸ್ಯರು : ಮತಕ್ಕೆ ಹಾಕಿ.

ಶ್ರೀ ಬಿ. ಸೋಮಶೇಖರ್ : ಸರ್ಕಾರ ಈ ಅಧಿಸೂಚನೆಗಳನ್ನು ವಾಪಸ್ ತೆಗೆದುಕೊಳ್ಳಬೇಕು.

ಗೊಂದಲ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ:

"2001ರ ಕರ್ನಾಟಕ ಗಣಕೀಕೃತ ನೆಟ್‌ವರ್ಕ್ ಲಾಟರಿ ನಿಯಮಗಳನ್ನು ರಚಿಸಿ, ದಿನಾಂಕ 16.5.2001 ಎಂದು ಹೊರಡಿಸಲಾದ ಆ:181:ಸಉಲಾ:2000ನೇ ಸಂಖ್ಯೆಯ ಅಧಿಸೂಚನೆ;

ಮತ್ತು

1999ರ ಕರ್ನಾಟಕ ರಾಜ್ಯ ಲಾಟರಿ ನಿಯಮಗಳನ್ನು ರಚಿಸಿ, ದಿನಾಂಕ 8.9.2000ದಂದು ಹೊರಡಿಸಲಾದ ಆಇ:117:ಸಉಲಾ:97ನೇ ಸಂಖ್ಯೆಯ ಅಧಿಸೂಚನೆ"ಗಳನ್ನು ಹಿಂದಕ್ಕೆ ಪಡೆಯಲು ಈ ಸಭೆಯು ಅನುಮತಿ ನೀಡುವುದು.

ಗೊಂದಲ

Sri. B. Somashekar : I press for divison.

ಗೊಂದಲ

Sri. S. Sureshkumar : I demand for divison.(The House divided)

ಅಧ್ಯಕ್ಷರು : ಹೊರಗಡೆ ಯಾರು ಇದ್ದಾರೆಂದು ನೋಡಿ. ಎರಡು ನಿಮಿಷದೊಳಗೆ ಕರೆಯಿರಿ. ಬಿಲ್ ಹಾಕಿ.

ಗೊಂದಲ

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೇ, ನಾನು ವಿಭಜನೆಗಾಗಿ ಒತ್ತಾಯಿಸುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ : ಇದರಲ್ಲೂ ಆತ್ಮಸಾಕ್ಷಿ ಎಂದು. ಹಾಗೆ ಹೇಳುವುದು ಒಳ್ಳೆಯದು.

ಶ್ರೀ ಎಸ್. ಎಸ್. ಪಾಟೀಲ್ : ಆತ್ಮ ಸಾಕ್ಷಿ ಮತ ಕೊಡಲಿ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಕೇಳಬೇಕು.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ : ಸಾರ್, ನಾವು ಹೊರಗೆ ಹೋಗುತ್ತೇವೆ. ನಮಗೆ ಅವಕಾಶ ಕೊಡಲಿಲ್ಲ.

ಶ್ರೀ ಆರಗ ಜ್ಞಾನೇಂದ್ರ : ಸೆಂಟ್ರಲ್ ನಲ್ಲಿ ಲಾಟರಿ ಆಕ್ಟ್ ಮಾಡುವಾಗ, ಬಹುಶಃ ಈ ರೀತಿಯ ಲಾಟರಿ ತರಬಹುದು ಎಂಬ ಕಲ್ಪನೆ ಇರಲಿಲ್ಲ ಎಂದು ಕಾಣುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ಈ ಆಲ್ ಲೈನ್ ಲಾಟರಿ ಇಂತಹವೆಲ್ಲಾ ಬರುತ್ತವೆ ಎಂಬ ಕಲ್ಪನೆ ಅವರಿಗೆ ಇರಲಿಕ್ಕಿಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಇದಕ್ಕೆಲ್ಲಾ ಅದರಲ್ಲಿ ಅವಕಾಶವೇ ಇಲ್ಲ.

ಗೊಂದಲ

ಶ್ರೀ ಜಗದೀಶ್ ಶೆಟ್ಟರ್ : ರಾಜ್ಯದಲ್ಲಿ ಅದನ್ನು ಬ್ಯಾನ್ ಮಾಡಬಹುದಲ್ಲಾ.

ಶ್ರೀ ಡಿ.ಬಿ. ಚಂದ್ರೇಗೌಡ : 1999ರಲ್ಲಿ ಆದ ಶಾಸನ.

ಶ್ರೀ ಜಗದೀಶ್ ಶೆಟ್ಟರ್ : ಅಲ್ಲಿ ಮಾಡಿದ್ದಾರೆಂದು ಇಲ್ಲೂ ಮಾಡಬೇಕೇನು?

ಶ್ರೀ ಡಿ.ಬಿ. ಚಂದ್ರೇಗೌಡ : ಹಿಂದಿನ ಸರ್ಕಾರದವರು ಮಾಡಿದ್ದಾರೆಂದು ಮತ್ತೆ ಎಲ್ಲಾದರೂ ತಲೆಯ ಮೇಲೆ ಹಾಕಿರಿ! ಇದು 1999ರ ಶಾಸನ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ : ಆನ್‌ಲೈನ್ ಲಾಟರಿ ಎಂದು ಟಿಕೇಟ್ ಕೊಡುತ್ತಿದ್ದಾರಲ್ಲಾ, ಅದರಲ್ಲಿ ಸರ್ಕಾರದ ಸೀಲೇ ಇಲ್ಲ. ಅದೇ against to the Act. ಅದನ್ನೇ ನಾವು ಚರ್ಚೆ ಮಾಡುತ್ತಿರುವುದು.

Sri D.B. Chandregowda : Under the same Act.

ಶ್ರೀ ಆರಗ ಜ್ಞಾನೇಂದ್ರ : ಓ.ಸಿ.ಯನ್ನೇ ಈಗ ಕಾನೂನುಬದ್ಧ ಮಾಡಿದ್ದು.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ : ಇದರಿಂದ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿ ಹಣ ಲುಕ್ಸಾನು ಆಗುತ್ತಿದೆ.

ಅಧ್ಯಕ್ಷರು : ಎರಡು ನಿಮಿಷ ಆಯಿತು. ಈಗ ಬಾಗಿಲು ಹಾಕಿ.

ಶ್ರೀ ಆರಗ ಜ್ಞಾನೇಂದ್ರ : ಆನೆ ಮಾಡಲಿಕ್ಕೆ ಅನುಮತಿ ಕೊಟ್ಟರೆ ಬಾಲ ತೆಗೆದುಕೊಂಡು ಹೋಗಿ ಸೊಂಡಿಲ ಹತ್ತಿರ ನೀವು ಬಂದಿದ್ದೀರಿ.

ಅಧ್ಯಕ್ಷರು : ಈಗ ಮಾನ್ಯ ಸೋಮಶೇಖರ್ ಅವರು ಏನು ಪ್ರಸ್ತಾವವನ್ನು ಮೂವ್ ಮಾಡಿದ್ದಾರೆ? ಅದರ ಪರವಾಗಿ ಇರುವವರು ಕೈ ಎತ್ತಿ.

ಗೊಂದಲ

ಸಭೆಯನ್ನು ವಿಭಜಿಸಲಾಯಿತು

ಅಧ್ಯಕ್ಷರು : ಈಗ ಮತ ಎಣಿಕೆಯ ವಿವರವನ್ನು ಹೇಳುತ್ತೇಣೆ. ವಿಭಜಿಸಿದಾಗ ಫಲಿತಾಂಶ ಹೀಗಿದೆ.

ಹೌದು – (ಪ್ರಸ್ತಾವದ ಪರವಾಗಿರುವವರು) – 39

ಇಲ್ಲ – (ಪ್ರಸ್ತಾವದ ವಿರೋಧವಾಗಿರುವವರು) – 60

ಸೂಚನೆಯು "ಇಲ್ಲ" ಎನ್ನುವವರ ಪರವಾಗಿದೆ.

ಪ್ರಸ್ತಾವ ಬಿದ್ದುಹೋಯಿತು ಮತ್ತು ತಿದ್ದುಪಡಿ ಪ್ರಸ್ತಾವ ತಿರಸ್ಕರಿಸಲ್ಪಟ್ಟಿತು.

ಶ್ರೀ ಬಿ. ಸೋಮಶೇಖರ್ : ಆಡಳಿತ ಪಕ್ಷದವರು ತೆಗೆದುಕೊಂಡಂತಹ ನಿಲುವು ಇವತ್ತು ಸಾರ್ವಜನಿಕರ ಹಿತಕ್ಕೆ ಧಕ್ಕೆ ಆಗಿದೆ. ಸಮಾಜವನ್ನು ಹಾಳು ಮಾಡತಕ್ಕಂಥ ನಿಲುವನ್ನು ತೆಗೆದುಕೊಂಡಿದ್ದಾರೆ. ಅದಕ್ಕೆ ಪ್ರತಿಭಟಣೆ ಮಾಡಿ ನಾವು ಹೊರಗೆ ಹೋಗುತ್ತಿದ್ದೇವೆ.

(ಅಖಿಲ ಭಾರತ ಪ್ರಗತಿಪರ ಜನತಾದಳದವರು ಶ್ರೀ ಬಿ. ಸೋಮಶೇಖರ್ ಅವರ ನೇತೃತ್ವದಲ್ಲಿ ಸಭಾತ್ಯಾಗ ಮಾಡಿದರು.)

ಅಧ್ಯಕ್ಷರು : ಆಗಲೇ ಹೋಗಬೇಕಾಗಿತ್ತು. ಈಗ ಓಟಿಂಗ್ ತೆಗೆದುಕೊಂಡು ಆದಮೇಲೆ ಏಕೆ ಹೋಗಬೇಕಾಗಿತ್ತು?

ಗೊಂದಲ

ಅಧ್ಯಕ್ಷರು : ಓಟಿಂಗೂ ಆಗಬೇಕು, ಪ್ರತಿಭಟನೆಯೂ ಆಗಬೇಕಾ?

ಶ್ರೀ ಎ. ಪಾಪಣ್ಣ : ಇವರು ಪ್ರಜಾಪ್ರಭುತ್ವವನ್ನು ಕೊಲೆ ಮಾಡುತ್ತಿದ್ದಾರೆ.

ಗೊಂದಲ

ಶ್ರೀ ಆರಗ ಜ್ಞಾನೇಂದ್ರ : ಸರ್ಕಾರದಲ್ಲಿ ನನ್ನ ಒಂದು ವಿನಂತಿ. ದಯವಿಟ್ಟು ನಿಮ್ಹಾನ್ಸ್ ಆಸ್ಪತ್ರೆಯ ಬ್ರಾಂಚ್ ಗಳನ್ನು ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ತೆರೆಯಬೇಕು. ಈ ಲಾಟರಿಯಿಂದ ಬಹಳ ಜನ ಹುಚ್ಚರಾಗುತ್ತಿದ್ದಾರೆ. ಹುಚ್ಚಾಸ್ಪತ್ರೆಯನ್ನು ಬಲಗೊಳಿಸುವುದಕ್ಕೋಸ್ಕರ ಈ ಲಾಟರಿ ಹಣವನ್ನು ವಿನಿಯೋಗ ಮಾಡಲಿ ಎಂದು ಹೇಳುತ್ತೇನೆ.

ಅಧ್ಯಕ್ಷರು : ಶ್ರೀ ಎಸ್.ಎಂ. ಕೃಷ್ಣ, ಮಾನ್ಯ ಮುಖ್ಯಮಂತ್ರಿಯವರು....

ಶ್ರೀ ಜಗದೀಶ್ ಶೆಟ್ಟರ್ : ಜೀರೋ ಅವರ್ ಯಾವಾಗ ತೆಗೆದುಕೊಳ್ಳುತ್ತೀರಿ?

ಅಧ್ಯಕ್ಷರು : ಬರೇ ಇಂಟ್ರಡಕ್ಷನ್ ಅಷ್ಟೇ.

ಶ್ರೀ ಪಿ.ಜಿ.ಆರ್. ಸಿಂಧ್ಯ : ವಿತ್ತೀಯ ಕಾರ್ಯಕಲಾಪಗಳು ಪ್ರಾರಂಭ ಆಗುವ ಮುಂಚೆ ಬೇರೆ ವಿಚಾರ ಇದೆ.

ಶ್ರೀ ಜಗದೀಶ್ ಶೆಟ್ಟರ್ : ಜೀರೋ ಅವರ್ ವಿಚಾರ ಇದೆಯಲ್ಲಾ.

ಅಧ್ಯಕ್ಷರು : ಈಗ ಬರೇ ಇಂಟ್ರಡಕ್ಷನ್. ಆಮೇಲೆ ತೆಗೆದುಕೊಳ್ಳೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಶೂನ್ಯ ವೇಳೆ ಮುಗಿದು ಹೋಗುತ್ತದೆ. ಶೂನ್ಯ ವೇಳೆ ಮುಗಿದ ಮೇಲೆ ವಿತ್ತೀಯ ಕಾರ್ಯಕಲಾಪಗಳು ಅಂದರೆ ಹೇಗೆ?

ಅಧ್ಯಕ್ಷರು : ಇದು ಒಂದೇ ನಿಮಿಷದ ಇಂಟ್ರಡಕ್ಷನ್ ಅಷ್ಟೇ.

4. ವಿತ್ತೀಯ ಕಾರ್ಯಕಲಾಪಗಳು

2003–2004ನೇ ಸಾಲಿನ ಪೂರಕ ಅಂದಾಜುಗಳ (ಮೊದಲನೇ ಕಂತು)ನ್ನು ಮಂಡಿಸುವುದು.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆ ಕೋರಿ 2003–2004 ನೇ ಸಾಲಿನ ಪೂರಕ ಅಂದಾಜುಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.